ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಅಥವಾ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟುಕೊಳ್ಳಲಾಗುವದು. ದರವನ್ನು ಸಮಜ್ಞಾ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪಕ್ಕೀ ಇಟ್ಟುಕೊಳುವ ವ್ಯವಸ್ಥೆಯಿದ್ದು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾ ಜಿಯಾ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡವ್ಲಿರವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು

ಸ್ವರಾಜ್ಯ ಸಾಧ್ಯತಾಂಶ್ಯದ ಭಿಕ್ಷೆ.

ಈ ಕೆಳಗಿನವರು ಮೊನ್ನಿನ ದಿವಸ ಈ ಊರಲ್ಲಾದ ಅಂಜನೆಯ ತಾರೀಖಿನ ರಾಷ್ಟ್ರೀಯ ವಾರದ ಪತ್ರಿಕೆ ಮತ್ತು ಭಿಕ್ಷೆಯ ಪೈಕಿ ದೊರೆತ ಸ್ವರಾಜ್ಯ ಸಾಧ್ಯತಾಂಶ್ಯಕ್ಕಾಗಿ ದೊರೆತ ಒಡವೆ ಮತ್ತು ನಗದು ಭಿಕ್ಷೆ.

(೧) ಶ್ರೀ ಗೌಡನಾಯಕ ಅಬ್ಬೆಶ್ವೀ ಗುಂಡಿ
(೨) ಶ್ರೀ. ಸೌ॥ ಸೀತಾಬಾಯಿ ಕಲ್ಲೂರ ಹಳ್ಳೇ ಏಕಸರ್ಮಾಗ್ಗೂ ಗುಂಡನ್ನದು ಬೆಲೆ ಸುಮಾರು ೧೫೫ ರೂ
(೩) ಶ್ರೀ. ಸೌ॥ ರಾಧಾಬಾಯಿ ಕುಂಬಿಕೋಣ ದೊಡ್ಡ ಹೊಸ ಏಕನಂಬಿ, ಬೆಲೆ ಸುಮಾರು ೩೫ ರೂ
(೪) ಶ್ರೀ. ಶ್ರೀಶೈಲ ಒಂದು ಪವನಿನ ಉಂಗುರ ಬೆಲೆ ಸುಮಾರು ೧೫ ರೂ
(೫) ಶ್ರೀ. ದುಡಪ್ಪ ಎಲ್ಲಪ್ಪ ಕಳಸಗೌಡ್ರ ೫೦ ರೋಪಾ
(೬) ವೈಶ್ಯಾಂಜನೇಯ ವಿದ್ಯಾರ್ಥಿ ಮತ್ತು ನಾಲ್ಕು ಹುಡುಗರು, ಕೂಡಿ ಕಿಸಿಗಿ ಕೂಡಿಸಿಕೊಟ್ಟದ್ದು.

ಶ್ರೀ ರಾಷ್ಟ್ರೀಯ ಶಾಲೆಯ ಶಿಕ್ಷಕರು ಇವರು ಅಂಕೋಲೆಯಲ್ಲಿ ಸತ್ಯಾಗ್ರಹ ಆಶ್ರಮದ ಮೇಲ್ವಿಚಾರಣಾರ್ಥವಾಗಿ ಸುಮಾರು ನಿವಸ ಇಲ್ಲಿಂದ, ಸ್ವಯಂಸೇವೆ ಬೆಳೆಸಿದರು.

ಅಂಕೋಲೆಗೆ ಮುಂಗಾವಲಿನವರ ಪ್ರಯಾಣ

ಈ ಮೊದಲು ಪ್ರಸಿದ್ಧ ಮಾಡಿದಂತೆ ಮೊನ್ನಿನ ದಿವಸ ಹುಬ್ಬಳ್ಳಿಯಿಂದ ಕಲ್ಪಟ್ಟಣ ಪಟಾಣ ಪೂರ್ವ ನಿರ್ಣಯವಾಗಿ ಕನ್ನಡಪತ್ರಿಕೆಯ ಸಂಪಾದಕರ ಗಂಗಾಧರರಾವ ಯಲ್ಲಾಪೂರಕ್ಕೆ

(೧) ಶ್ರೀ ಬುದ್ಧಿಮಂಧವ ಬಿಲಿಗಿ ಧಾರವಾಡ
(೨) ಶ್ರೀ ಪರಪ್ಪ ಗ್ಯಾನಗೌಡರ ಬಿ
(೩) ಶ್ರೀ ಶಿವಾನಂದಸಿದ್ಧಿ ಬಂಕಾಪೂರ
(೪) ಶ್ರೀ ಕಲ್ಲನಗೌಡ ಫಕೀರಗೌಡ ಪಾಟೀಲ ಧಾರವಾಡ

ಈ ನಾಲ್ವರು ಪ್ರಯಾಣ ಬೆಳೆಸಿದ್ದಾರೆ.

ಬಂಗಾಲದ ಸ್ಥಿತಿ.

ಬಂಗಾಲ ಇಲಾಖೆಯಲ್ಲಿ ಈವರೆಗೆ ಏಳು ಸಾವಿರ ಶರಣರು ಸತ್ಯಾಗ್ರಹದ ಪ್ರತಿಜ್ಞಾಪತ್ರಿಕೆಯು ಸಹಿ ಮಾಡಿದ್ದಾರೆ.

ಖಾದಿ ಅಂಗಡಿ.

ಧಾರವಾಡ ಜಿಲ್ಲಾ ಕುಂದಗೋಳದಲ್ಲಿ ಸ್ವದೇಶೀ ನೈನೂಲಿನ ವಸ್ತ್ರಭಾಂಡಾರದ್ದು ಒಂದು ಶಾಖೆಯಿತ್ತು. ಇದನ್ನು ದೂರಮಾಡುವದಕ್ಕಾಗಿ ಮ॥ ರಾ॥ ರಾ॥ ಈರಯ್ಯನವರು ಶಿದ್ವೀರಯ್ಯನವರು ಕುಲಕರ್ಣಿ ಇವರು ಇದೇ ಶಕೆ ೧೮೩೩ನೇ ಪ್ರಮೋದನಾಮ ಸಂವತ್ಸರ ಚೈತ್ರ ಶು॥ ೧೫ ಚಂದ್ರವಾರ ತಾ॥ ೩೧-೩-೧೯೧೧ನೇ ಇಸ್ವಿ ದಿವಸ ಖಾದೀ ಭಾಂಡಾರವನ್ನು ಸ್ಥಾಪನೆಮಾಡಿದರು. ಹೊಸವರ್ಷದಲ್ಲಿ ಖಾದಿಯನ್ನು ಪ್ರಚಾರ ಮಾಡಿದ್ದರಿಂದ ವಿಶೇಷ ಆನಂದ ಸ್ಪುರಿಸಿದ್ದು. ಕುಂದಗೋಳದಂಥ ಪ್ರತಿಯೊಂದು ಊರಲ್ಲಿ ಖಾದಿಯ ಅಂಗಡಿಯೊಂದು ತೆರೆದು ಪ್ರಾರ್ಥನೆ.

ಫಕ್ಕೀರಪ್ಪಾ ಮಲ್ಲಪ್ಪಾ ಉಮಚಗಿ

ಸತ್ಯಾಗ್ರಹ ಮತ್ತು ಕಾಯದೆಭಂಗದ ವಿರುದ್ಧ ಅಸ್ಪೃಶ್ಯರ ನಿರ್ಣಯ

——(೦)——

ಪುನೆಯ ಅಸ್ಪೃಶ್ಯರು ತಮ್ಮ ಉದ್ಧಾರಕರ್ತರಾದ ಮಹಾತ್ಮರಿಗೆ ಪ್ರತ್ಯಕ್ಷದ ಕಾಯದೆಭಂಗದ ಕಾಲದಲ್ಲಿ ತೊಂದರೆಕಾಗದಂತೆ ಅವಿಚಾರದ ಕೃತ್ಯ ಕೈಕೊಂಡಿದ್ದಾರೆ. ಇವರು ದಂಡಿಗೆ ಹೋಗಿ, ಮಹಾತ್ಮರನ್ನು ಕಂಡು, ನೀವು ನಮ್ಮನ್ನು ಸ್ಪೃಶ್ಯರಲ್ಲಿ ಸೇರಿಕೊಳ್ಳಬಿಗ್ದರೆ- ದೇವಾಲಯದಲ್ಲಿ ದೇವರ ದರ್ಶನಕ್ಕೆ ಮುಕ್ತದ್ವಾರವಿಡದಿದ್ದರೆ- ನಾವು ನೀವು ಉಪವಾಸ ಮಾಡಲಿಕ್ಕೆ ಹೋಗುವಾಗ ನಮ್ಮ ಮುಂದೆ ಅಡ್ಡ ಬಿದ್ದು, ನಿಮ್ಮ ದಾರೀ ಕಟ್ಟುವೆವೆಂದು ಹೇಳಿದರು ೫೫ ಕೋಟಿ ಜನರ ಉದ್ಧಾರಕ್ಕಾಗಿ ನಾವು ನಿಂತಿದ್ದು ಅದರಲ್ಲಿ ನಿಮ್ಮ ಏಳುಕೋಟಿ ಜನರ ಸೌಕರ್ಯವು ತಾನಾಗಿಯಾಗುವದು; ಕಾಳ್ಗಿಚ್ಚುಳ್ಳವರಾಗಿರೆಂದು ಮಹಾತ್ಮರು ಇವರಿಗೆ ಉಪದೇಶ ಮಾಡಿದ್ದು ಡಬ್ಬು ಪೊಡದಮೇಲೇ ನೀರು ಸುರುವಿದಂತಾಗಿರುತ್ತದೆ.

ಸ್ಮಶಾನವಾಸಿ ರಾಮ ಭಟ್ಟನ ಕೊಲೆ.

—(೧)—

ಇಲ್ಲಿಯ ಸ್ಮಶಾನದಲ್ಲಿ ದಿನಕರ್ಮ ಮಾಡಿಸುತ್ತಿದ್ದ ರಾಮಭಟ್ಟನನ್ನು ಯಾವನೋ ಕೊಡ್ಲೆಯಿಂದ ಕೊಂದು ಕಲಾಯನ ಹೇಳಿಸಿದ್ದಾನೆ.

ವಿಜಯದ ವರ್ಗಣೆದರ.

ನಿತ್ಯ ಪತ್ರಿಕೆ

೧೫ ತಿಂಗಳಿಗೆ ರೂ. ೧೫-೮-೦
೬ ,, ೬-೦-೦
೩ ,, ೩-೮-೦

ವಾರ ಪತ್ರಿಕೆಗೆ ೧ ವರ್ಷಕ್ಕೆ ೩-೧೫-೦

ಪೇಪರ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿಕೊಳ್ಳಿರಿ.

ಮ್ಯಾನೇಜರ ವಿಜಯ

ದಿ ಧಾರವಾಡ ಅರ್ಬನ ಮ್ಯೂಚ್ಯುವಲ ಆಸರೆಟಿಪ್ಪ ಬ್ಯಾಂಕ ಲಿಮಿಟೆಡ

ಮುಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ತರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜಿಂದಿಗಯು ಒಂದು ಲಕ್ಷ ರೂಪಾಯಿ ಬೆಳು ಹುಂಡಿ ಮೂಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವುದು. ಕಾಹೀಮ ಮತ್ತು ಬೇರೆ ತರಹ ಹಿವಾಡಿಟಿಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹೀ ಮಾಡಿದವರಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಪಿಕ್ಸಡ ಟ್ರೆ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು ಸಾಲ ಪಡೆದುಕೊಳ್ಳುವ ಪದ್ಧತಿಯು ಇದರಲ್ಲಿ ನೂರಕ್ಕೆ ತಿಂಗಳಿಗೆ ಹತ್ತೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಎಪ್ರಿಲ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದು. ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಷಯವನ್ನು ಪ್ರೋತ್ಸಾಹಿಸುವೀಕೆಂದು ವಿನಂತಿಯು.

ಮ್ಯಾನೆಜರ ವಿಜಯ, ಧಾರವಾಡ.

ಸುಸಮಯ.

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡವಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B 1443

ನಿತ್ಯ ಪತ್ರ

ವಿಕ್ರಯ

ಬೆಲೆ ಅಧಾ-ಅಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ) ಧಾರವಾಡ ಬುಧವಾರ ತಾರೀಖು ೯ ನೇ ಎಪ್ರಿಲ ೧೯೩೦ (ಸಂಚಿಕೆ ೧೦೧

ದಿಜವಿಠ ದೇಶಪಾಂಡೆ ಗಂಗಾಧರರಾಯರ

ವೀರ ಸಂದೇಶವು

ಕರ್ನಾಟಕದ ಸಹೃದಯ ಬಂಧುಭಗಿನಿಯರೇ,

ಬಾಹ್ಯವಿಷಯ ಸರ್ವಾಗ್ರಹಣಂಡರೆದ ಬ್ರಿಟಿಷರನ್ನಾಗಿ ಪಟ್ಟಿ ಸೀಪ್ಪೆ ನೆನಗೆ ಈ ಸರ್ವಾಗ್ರಹ ಸಮರದಲ್ಲಿ ಆಗ್ರಹಪೂರ್ವವನ್ನು ಕೊಟ್ಟಿದ್ದಿರಿ ಸರಕಾರದವರು ದೇಶಸೇವಕನಾದ ನನಗೆ ಜೀರೆ ಮಾನ ಮರ್ಯಾದೆಗಳನ್ನು ಕೊಡಲಿದ್ದರೂ ನನ್ನನ್ನು ಕಾರಾಗೃಹದಲ್ಲಿ ಬಂಧಿಸಲು ಸಿದ್ಧರಾಗಿ ಹೆಜ್ಜೆ ಹಿಡಿದು ಅಗ್ರ ಪಾನವನ್ನು ಕೊಟ್ಟಿದ್ದಾರೆ. ಈ ಪ್ರಸಂಗದಲ್ಲಿ ಕರ್ನಾಟಕದ ಸನ್ಯ ಬಂಧು ಭಗಿನಿಯರು ಈ ಧರ್ಮಯುದ್ಧದಲ್ಲಿ ನಿರ್ಭೀತಿಯಿಂದ ಅಧಿನಾಯಕತ್ವದ ಮಹಾತ್ಮಾ ಗಾಂಧಿಕಳವಳಿಕಾರ್ಯಪೂರ್ಣ ಸಹಾಯ ಒದಗಿಸಿರೆಂದು ನಾನು ಕಂಡಿದ್ದೇನೆ. ಕರ್ನಾಟಕದಲ್ಲಿಯ ವೀರ ಕನಡ ಕುಲಿಂಯ ಜನ್ಮ ಬಂಗಾರಿಬೇಕೆಂದನ್ನು ಸಿದ್ಧಪಡಿಸುವ ಶುಭಸಮಯವು ಈಗ ಬಂದಿದೆ. ವೀರ ತರುಣ ವೀರರೇ, ವೀರ ರಣಚಾಂಡಿಯನ್ನು ಆದಿ, ಈ ಅಸುರೀ ಸಾಮ್ರಾಜ್ಯವನ್ನು ಮಣ್ಣು ಗೂಡಿಸಲಿಕ್ಕೆ ಸಿದ್ಧರಾಗಿರಿ.

ದೇಶಪಾಂಡೆ ಗಂಗಾಧರ.

ಮಹಾತ್ಮರ ಸತ್ಯಾಗ್ರಹ

ಮುಖ್ಯನಾಯಕರಾದ ಮಹಾತ್ಮರನ್ನು ಬಿಟ್ಟು ಉಪನಾಯಕರನ್ನು ಹಿಡಿದ ಸರ್ಕಾರ

ಬೇರೆ ಕಡೆಯಿಂದ ಮುಂಬಯಿಯಿಂದ ಬಂದ ಕಾರಿನ ಸುದ್ದಿಗಳನ್ನು ಪ್ರಕಟ ಮಾಡಿದ್ದೇವೆ. ಅವನ್ನು ಓದಲಾಗಿ ಅಲ್ಲಿಯ ಸರ್ಕಾರವು ಸದ್ಯದಲ್ಲಿ ಮಹಾತ್ಮರ ಮೈಗೆ ಕೈ ಹಚ್ಚದೆ, ಅವರ ಉಪನಾಯಕರನ್ನು ಹಿಡಿಯುವ ಕೋಲಾಹಲವೆಬ್ಬಿಸಿರುತ್ತಾರೆಂದು ಕಂಡುಬರುವದು. ಮಹಾತ್ಮರು ದಿವ್ಯಗಿರಿಯ ವಿಚಾರಪರ್ಯಂತವು ತೀರ ಉಪೇಕ್ಷೆ ಮಾಡಿದ್ದಾರೆ. ಅವರನ್ನು ಜಗತ್ತಿಸಲ್ಲಿದ್ದಾರೆಂದು ಹೇಳುವಂತೆ ಸಹ ಲಕ್ಷ್ಯಕೊಟ್ಟಿಲ್ಲ. ಬಲಾಲಪೂರಕ್ಕೆ ೫೦೦ ಶಸ್ತ್ರಧಾರಿ ಪೋಲಿಸರನ್ನು ಕಳಿಸಿದ್ದಾರೆ. ಸೋಲ್ಡರನ್ನು ಕಳಿಸುವರೆಂದು ವರ್ತಮಾನವಾಗಿತ್ತು. ಶಂಕಿಯ ಬೇರೆ ಹಾಕಿ, ಇವರೂ, ಇವರ ಸ್ವಯಂಸೇವಕರೂ ಉಪ್ಪಿನ ಉಗ್ರಾಣಕ್ಕೆ ಬರದಂತೆ ದಾರೀ ಕಟ್ಟು ಮಾಡುವರು; ಇವರು ಉಪ್ಪು ಒಯ್ಯುವಾಗ, ಮಾಡುವಾಗ ಜೇಕಳೆಯಿಂದ ನೀರು ಹೊಡೆದು ಇವರ ಗ್ರಹಣಂಗ ಮಾಡುವರೆಂದು ದಿನಾಲು ತಗಲಾದ ವರ್ತಮಾನ ಬರುತ್ತಿತ್ತು. ಇವೆಲ್ಲ ಸುಳ್ಳಾಯಿತು.

ಮಹಾತ್ಮರು ದಂಡಿಗೆ ಹೋದ ಕೂಡಲೆ ಅಲ್ಲಿ ನೀರಿನ ಕೊರತೆ ಕೋರಿತು. ಸಮುದ್ರ ಸಾಮೀಪ್ಯ ನೋಡಲಿಕ್ಕಂತೂ ಹತ್ತೆಂಟುಸಾವಿರ ಜನರು ನೇರಿದರು. ನೀರಿನ ಕೊರತೆಯಾಗಿ ಅಡಿಗೆಗೆ ಸಾಲದಾದರೆ- ಹುರುಮುರಿ, ಕೊಬ್ಬರಿ, ಹಣಕಡ್ಲಿ ಬಿಲ್ಲ ತಿಂದು ಸ್ವಯಂಸೇವಕರು ಜೀವಿಸಬೇಕೆಂದು, ಮಹಾತ್ಮರು ಆಜ್ಞಾಪಿಸಿದರು. ಯುದ್ಧ ನೋಡಲಿಕ್ಕೆ ಒಂದಿವಸ ನಾಟಕದೊಳಗಿನ ನೋಟವಾಗಿರಕ್ಕೆಡ್ಡಿಲ್ಲ. ಹಾಗೂ ಕಾಯದೆಭಂಗ ಮಾಡಲೇಬೇಕೆಂದು ಮಹಾತ್ಮರು ಹೇಳಿಸಿದ್ದರು. ಸತ್ಯಾಗ್ರಹಕ್ಕೆ ಹೋದವರೂ, ನೋಡುವವರೂ ಕೂಡಲೆ ನಿರಾಶೆಯಾಗಬೇಕೆಂದೆ ಸರಕಾರದವರು ಅದ್ಭುತ ಚಮತ್ಕಾರ ಮಾಡಿ ತೋರಿಸಿದರು.

ಮಹಾತ್ಮರು ೧೮ನೇ ತಾರೀಖಿನಲ್ಲಿ ತಮ್ಮ ನಿಶ್ಚಯ ಆನ್ವೇಷ ತೀರಿಸಿಕೊಂಡು ಕಾಮಳಿದ ಬಂಗಲೆಯಿಂದ ಸಮುದ್ರದ ದಂಡೆಗೆ ಹೋದರು. ಅಲ್ಲೊಂದು ಕೊರೆ- ಆ ಕೊರೆಯಲ್ಲಿ ಸರಕಾರದ ಉಪ್ಪು ಇತ್ತು. ಉಪ್ಪಿನ ದುರ್ಗಿವ. ಪರಿಣಾಮ ಏನಾಗಿತ್ತೆಂದರೆ- "ಬೇವಾದಸಿ" ಆಗಿತ್ತು. ಸರಕಾರ ವತಿಯಿಂದ ಅದನ್ನು ಕಾಯಲು ಯಾರನ್ನೂ ಇಟ್ಟಿರಲಿಲ್ಲ. ಮಹಾತ್ಮರು ಸುತ್ತಲು ನೋಡಿದರು. ಏನೂ ಕಾಣಿಸಲಿಲ್ಲ. ಏಕಾಂಗಿ ಸೈನಿಕನಾಗಿ ಮಾತ್ರವಾಗಿದ್ದರು. ಕಳೆದ ೧೮ ವರ್ಷಗಳಲ್ಲಿ ಅವರು ಎಲ್ಲಿಯೂ ಇಷ್ಟು ಏಕಾಂಗಿಯಾಗಿರಲಿಲ್ಲವೇನೋ. ಅವರೊಬ್ಬ ಮನುಷ್ಯರೂ ಕಾಣಲಿಲ್ಲ. ಅಲ್ಲಿದ್ದ ಉಪ್ಪನ್ನು ಕೈಯ್ಯಿಂದು ಕಾಯದೆಭಂಗ ಮಾಡಿದರು. ನೀವು ಕಾಯದೆಭಂಗ ಮಾಡಿದಿರೆಂದು ಕೇಳುವ ಸ್ವಾಮಿಯೂ ಇಂಲಿಲ್ಲ. ತಮ್ಮನ್ನಾರೂ ಬಡಿಯುವವರಿಂದಿಲ್ಲವೆಂದು ಕಂಡು ಮಹಾತ್ಮರು ಹಿಂದಿರಿಗಿ ಉತ್ಸಾಹಕಳಕೊಂಡು ವಾಸಸ್ಥಾನಕ್ಕೆ ಬಂದರು.

ಸಂಕಾಂಡವರು ಇದೇ ಪ್ರಕಾರ ತಮ್ಮನ್ನು ಬಡತದೆ, ಒಂದು ಕಾರ್ಯಾಮಂಡಲ್ಲಿಷ್ಟು ದಿವಸವಿರಿಗೆಡುವರೆಂದು ಮಹಾತ್ಮರಿಗೆ ಘನಸ್ಪಷ್ಟವಾಗಿದೆ. ಕೆಲವು ದಿವಸ ಅಲ್ಲಿದ್ದು, ಅಲ್ಲಿಂದ ಹೊರಟು, ಬೇರೊಂದು ರೀತಿಯಿಂದ ಕಾಯದೆಭಂಗ ಮಾಡಲಹುದಾಗಿತ್ತು. ತಮ್ಮನ್ನು ಹಿಡಿಯಬಿದ್ದರೂ, ತಮ್ಮ ಸೂರಾರು ಉಪನಾಯಕರನ್ನಾ ಹಿಡಿದು, ಅವನ್ನು ಕುರಂಗದಲ್ಲಿ ಹಾಕಾವದರಿಂದ, ಕಾಯದೆಭಂಗವೆಸ್ಟೂ ಹಿವ್ಮೆಟ್ಟಲಾರದವಾದ್ದರಿಂದ, ಉಪನಾಯಕರಿಗೆ ಉತ್ತೇಜನಕೊಡಲು- ಬೇರೊಂದು ದೊಡ್ಡ ಪಟ್ಟಣಕ್ಕೆ ಹೋಗಬಹುದು. ಸಾಮಾರಮತಿಗೆ ಹೋಗಲಾರರು, ಏಕಂದರೆ- ಜಯಸಂಪಾದನೆಯಾಗಲಿಕ್ಕ, ವಿಜಯೋತ್ಸವಗಳಾಗಿ ಅಲ್ಲಿಗೆ ಹೋಗಬೇಕೆಂದು ವೀರಪ್ರತಿಜ್ಞೆಯು. ತಮ್ಮನ್ನೂ, ತಮ್ಮವರನ್ನೂ ಹಿಡಿಯುವಿದ್ದರೆ- ಉಪ್ಪನ್ನು ಬಿಟ್ಟು, ಪರದೇಶಿ ಅರಿವೆ ಅಥವಾ ಕರೆಯ ಅಂಗಡಿಗರ ಮುಂದೆ ಪಿಕೆಟಿಂಗ ಪ್ರಾರಂಭಿಸುತ್ತಿದ್ದರು. ಮಹಾತ್ಮರು ತಮ್ಮ ರಣಮಂಡಲವನ್ನು ಬದಲು ಮಾಡದಂತೆ ಸರಕಾರದವರು ತಮ್ಮ ವತಿಯಿಂದ ಕರ್ತವ್ಯಜಾಗೃತರಾದ್ದು ಸ್ತುತ್ಯವೇ ಸರಿ

ಬಗಲೊಳಗಿನ ಕೂಸು ಸಹಿತ ಸತ್ಯಾಗ್ರಹ

— (೦) —

ಮುಂಬಯಿಯ ಶೀವಾಸರನದ ಸುದರಿಂಟೆಂಡರಾಗಿದ್ದ ಕ್ರೈಸ್ತಧರ್ಮಿಯಾದ ತಮಲಾಬಾಯಿಯು ತನ್ನ ವೇಳಗುಡಿಯುವ ಕೂಸು ಕಟ್ಟಿಕೊಂಡು ಮಹಾತ್ಮರ ಸತ್ಯಾಗ್ರಹದಲ್ಲಿ ಸೇರಿದ್ದಾಳೆ.

ಯೋಗಾಯೋಗ-

ಮುಂಬಯಿ ಮತ್ತು ದಂಡಿಯಲ್ಲಿ ನಡೆದ ಕಾಯದೆಭಂಗಕ್ಕೆ ವಿಲಕ್ಷಣವಾದ ಯೋಗಾಯೋಗ ಬಂದಿದೆ. ಮುಂಬಯಿಯ ರಣಕ್ಷೇತ್ರದ ಹತ್ತಿರ ಹಾದಿ ಅಲ್ಲಿಯವರ ದರಗಾ ಇದ್ದು, ದಂಡಿಯಲ್ಲಿಯ ರಣಮಂಡಲದಲ್ಲಿ ಇವರ ಪತ್ನಿ ಬೀದಿಸಾಹೇ

ದಿಲ್ಲಿಯ ೧೨೦೦೦ ಮುಸಲಮಾನರು ಕಾರದಾ ಮದಿವೆಯ ಕಾಯದೆ ಮುರಿದರು.

—()—(೦)—()—

ಜುಮ್ಮಾಮಸೀದಿಯಲ್ಲಿ ಅಲ್ಪವಯಿಗಳ ಮದಿವೆ ಮಾಡಿದರು.

—:(೦):—

ಮುಸಲಮಾನರು ಶಾರದಾ ಬಿಲ್ಲಿಗೆ ಒಪ್ಪುವಾಗಿ ವಿರೋಧಿಸುವವರಾಗಿದ್ದಾರೆ. ಆ ಪ್ರಕಾರ ಅವರ ಅಯಸ್ಸಿನಸಾಹೇಬರ ಮುಂದೆ ಸ್ಪಷ್ಟವಾಗಿ ಹೇಳಿದ್ದಾರೆ. ಈ ಕಾಯದೆಯು ತಮಗೆ ಒಪ್ಪಿಗೆಯಾಗಿಲ್ಲೆಂದು ಕಾಯದೆಭಂಗ ಮಾಡಲು ಸಿದ್ಧರಾಗಿರುವಂತೆ ಜಾಹೀರ ಮಾಡಿದ್ದಾರೆ ಇದನ್ನು ಸ್ಥಿತಿಯಿಂದ ತೋರಿಸಲು ದಿಲ್ಲಿಯಲ್ಲಿ ಮೌಲಾನಾ ಮಹಮದಲ್ಲಿ ಮೊದಲಾದ ಮುಸಲಮಾನ ಮುಂದಾಳುಗಳು ಹೋದ ಶುಕ್ರವಾರ ಪ್ರಾರಂಭ ಮಾಡಿದರು. ಅಂದು ಜುಮ್ಮಾದ ನಮಾಜ ಮುಗಿವ ಕೂಡಲೆ, ಅಲ್ಪವಯಸ್ಕಯಾದ ಹುಡುಗ ಹುಡಿಗೆಯ ಮದಿವೆ ಮಾಡಿದರು. ಈ ವಿವಾಹೋತ್ಸವ ನೋಡಲು- ಅದರಲ್ಲಿ ಭಾಗ ತಕ್ಕೊಳ್ಳಲು ೧೫ ಸಾವಿರ ಜನರು ನೇರಿದ್ದರು. ಮೌ. ಅಬ್ದುಲ ಖಾದರಸಾಹೇಬರು ಖುತ್ಬೆ ಹಾಗಿದ್ದರು. ಮದಿವೆಯಾದ ಒಳಿಕ ಮೌಲಾನಾ ಮಹಮ್ಮದಲ್ಲಿಯವರು ಸಮಯೋಚಿತ ಭಾಷಣ ಮಾಡಿದರು. ಮೈಗಂಬರರು ಸ್ವಲ್ಪ ಅಲ್ಪವಯಸ್ಸಿಯಲ್ಲಿ ಮದಿವೆಯಾದರು. ಆದರೂ ಹುಡುಗಿಯ ವಿಷಯದಲ್ಲಿ ಅವರ ಪ್ರೇಮವು ಕಡಿಮೆಯಾಗಲಿಲ್ಲ. ಈಗಿನ ಕಾಯದೆಗಿಂತ ೧೫೦೦ ವರ್ಷಗಳ ಹಿಂದೆಯಾದ ಕಾಯದೆಯು ನಮಗೆ ಪವಿತ್ರವಾದದ್ದಿರುತ್ತದೆ. ಮೈಗಂಬರರು ತಮ್ಮ ಅಲ್ಪವಯಿ ಹೆಂಡತಿಯನ್ನು ಪ್ರೀತಿಸಿದಂತೆ ಈ ಅಲ್ಪವಯಿ ವರನೂ ಪ್ರೀತಿಸಲೆಂದು ಆಶೆಕ್ಷಿಸುತ್ತೇನೆಂದಾಗಿ ಭಾಷಣ ಮಾಡಿದರು ಮದಿವೆಯು ಕಾಗದದ ಮೇಲೆ ಮೌಲಾನಾ ಮಹಮ್ಮದಲ್ಲಿ ವಗಜರುದ್ದೀನ, ಬಾಂದೇ ಮಾಡನ ಜಮಾಯತುಖಲ್ಲಾದ ಅಧ್ಯಕ್ಷ, ಕಾಜಿ, ಮೌಲಾನಾ ಅಬ್ದುಲ ವಾಜೇದ ಮತ್ತು ವಧೂವರರ ತಂದೆತಾಯಿಗಳು ಸಾಕ್ಷಿ ಹಾಕಿದ್ದಾರೆ. ಇಷ್ಟೇ ಅಲ್ಲದೆ ಕಪ್ಪು ಮೇಲೆ ಬಿಟ್ಟಿ ಮಾಡಬೇಕೆಂದು ದಿಪ್ಪಿಸ್ಟ ನ್ಯಾಶಿಪ್ಟೇಟರಿಗೆ ತಿಳಿಸಿದ್ದು, ಕಾಯದೆಪ್ರಕಾರ ಅವರ ಹತ್ತರ ನೂರು ರೂಪಾಯಿ ತಾರಣಕ್ಕೆ ಡಿಪಾಸಿಟ್ ಇರಿಸಿದ್ದಾರೆ ಮುಸಲಮಾನರ ಕಾಯದೆಭಂಗವು, ಮಹಾತ್ಮರ ಕಾಯದೆಭಂಗದ ಕೂಡ, ಸರಕಾರಕ್ಕೆ ಎಂಡನೆಯ ಬಲವಾದ ಪೆಡು ತಂದಂತಾಯಿತು. ಒಂದು ಕಡೆಗೆ ತೆನೆ, ಮತ್ತೊಂದು ಕಡೆಗೆ ಬಾವಿಯು !!!

ತಾರಿನ ಸುದ್ದಿಗಳು.

ತಾರೀಖು ೭-೪-೧೯೨೦ ಸೋಮವಾರ.

ಕರ್ನಾಟಕದಲ್ಲಿ ಸತ್ಯಾಗ್ರಹವು ಪ್ರಾರಂಭವಾಯಿತು

ದೇಶಪಾಂಡೆ ಗಂಗಾಧರರಾಯರು ಉಪ್ಪಿನ ಕಾಯಿದೆಯನ್ನು ಮುರಿದರು

ರವಿವಾರ ತಾ॥ ೬ನೇ ದಿನ ದೇಶಭಕ್ತ ಗಂಗಾಧರರಾವ ದೇಶಪಾಂಡೆಯವರು ಬೆಳಗಾವಿಯಲ್ಲಿ ಕಾಯಿದೆಗೆ ವಿರುದ್ಧವಾದ ಉಪ್ಪನ್ನು ಚಾಹೀ ರಿತಿಯಿಂದ ಮಾಡಿ ಜಾಗೆ ತಿಳಿಸಿ ಪೇಟೆಯಲ್ಲಿ ಮಾರಿದರು. ಅವನ್ನು ೪ ಜನ ಲೀಗಾಯಿ ಕರೂ ಮೂವರು ಜೈನರೂ, ಇಬ್ಬರು ಮುಸಲಮಾನರೂ, ಪ್ರಕಾಶಯ್ಯನವರಾವ ಚೋಕಿ ಮುಂತಾದ ನಕೇಲರೂ ಕೊಂಡುಕೊಂಡರು. ಸರಕಾರದವರು ಹಿಡಿಯಲಿಲ್ಲ. ಹೀಗೆ ಕರ್ನಾಟಕದಲ್ಲಿ ಉಪ್ಪಿನ ಸತ್ಯಾಗ್ರಹವು ಯಶಸ್ವಿಯಾಗಿ ಪ್ರಾರಂಭವಾಗಿರುವದು.

ಈ ಸತ್ಯಾಗ್ರಹವನ್ನು ಕುರಿತು ಬೆಳಗಾವಿಯಲ್ಲಿ ವಿಶೇಷ ಅಲೋಚನಾ ಸಭೆಯು ಸೇರಿದ್ದು, ಅದಕ್ಕೆ ಶ್ರೀ ದಿವಾಕರರು ನಿನ್ನೆ ಮಧ್ಯಾಹ್ನ ರೈಲಿಂದ ಹೋಗಿರುವರು.

ಮಹಾತ್ಮಾಗಾಂಧಿಯವರನ್ನು ಸೆರೆ ಹಿಡಿಯಲಿಲ್ಲ

ತಾ॥ ೬ನೇ ದಿನ ದಂಡಿಯಲ್ಲಿ ಮಹಾತ್ಮರು ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅವನ್ನು ಸರಕಾರದವರು ಸೆರೆ ಹಿಡಿಯಲಿಲ್ಲ. ಇವರು ಕಾಯಿದೆಭಂಗ ಮಾಡುವಾಗ, ಒಬ್ಬ ಸಿವಾಯಿ ಅಥವಾ ಸರಕಾರೀ ಅಮಲದಾರನು ಇರಲಿಲ್ಲ !!!

ಉಪ್ಪಿನ ಜಪ್ತಿ.

— (೦) —

ಸರಕಾರದವರು ನಕರು ಬಂಗಾಲಿ ಮಣ ಉಪ್ಪನ್ನು ಜಪ್ತ ಮಾಡಿದ್ದಾರೆ.

ಗುಜರಾಥದಲ್ಲಿ ದಸ್ತಗಿರಿಯ ಕೋಲಾಹಲ !

ನೂರು ಜನರನ್ನು ಹಿಡಿದರು

—)(೦)(—

ಅಮೃತಲಾಲ ಶೇಟರಿಗೆ ಆರುವಾರದ ಶಿಕ್ಷೆ

ಮಹಾತ್ಮರನ್ನು ಹಿಡಿಯದಿದ್ದರೂ, ಉಪ್ಪಿನ ಕಾಯದೆ ಮುರಿದರೆಂದು ಗುಜರಾಥದ ಹಂಬು ಬೇರೆ ಬೇರೆ ಸ್ಥಳಗಳಲ್ಲಿ ನೂರು ಜನರನ್ನು ಹಿಡಿದಿದ್ದಾರೆ. ಇವಂಲ್ಲಿ ಶ್ರೀ. ಮನೆಲಾಲ ಕೋರಾರಿ, ರಾವ.ದಾಸ ಗಾಂಧಿ, ದಂಟಾರ ಗೋವಾಳದಾಸ ದೇಸಾಯಿ ಅಮೃತಲಾಲ ಶೇಟರು ಪ್ರಮುಖರಾಗಿದ್ದಾರೆ. ಶ್ರೀ. ಅಮೃತಲಾಲರಿಗೆ ಆರು ವಾರದ ಶಿಕ್ಷೆಯಾಯಿತು.

ಮಾಜಾಯಿಯಲ್ಲಿ ಶ್ರೀ ನರವನ್ನೆ ಅನಂತಿಕಬಾಯಿ ಗೋಖಲೆ, ಶ್ರೀ ಕಮಲಾಬಾದೇವಿ ಚಟ್ಟೋಪಾಧ್ಯಾಯಿನಿ ಮೊದಲಾದವರು ಸಾವಿರಾರು ಜನರು ಮುಂದೆ ಉಪ್ಪಿನ ಕಟ್ಟಲೆಗಳನ್ನು ಮುರಿದು ಉಪ್ಪು ಮಾಡಿದರು. ಆಗ ಅಲ್ಲಿ ಪೋಲಿಸರ ಕಾವಲಿತ್ತು.

ತಾ॥ ೬ನೇಯ ದಿನ ಬಳ್ಳಾರಿ, ಧಾರವಾಡ, ಬೆಳಗಾವಿ, ಅಂಕೋಲೆ ಮುಂತಾದ ಕರ್ನಾಟಕದ ಬೆರೆ ಬೇರೆ ಕಡೆಯಲ್ಲಿ ರಾಷ್ಟ್ರ ಧ್ವಜವಂದನೆಯೂ ನಗರ ಸಂಕೀರ್ತನೆಯೂ ಸಭೆಗಳೂ ಮೆರವಣಿಗೆಯೂ ಒಳ್ಳೇ ಯಶಸ್ವಿಯಾಗಿ ಆದವು.

ಶ್ರೀ ಕಾಜಲಗಿ ಹನಮಂತರಾಯರು ಬಿಜ್ಜವಾಡ ತೆಂಕಣಕೇರಿ ಮುಂತಾದ ಕಾರವಾರಜಿಲ್ಲೆಯಲ್ಲಿ ಹಳ್ಳಿಗಳಿಗೆ ಹೋಗಿ ಒಂದೆರಡು ಜನರ ಉತ್ಸಾಹವ ಹೆಚ್ಚುಕ್ಕಿಲಿದೆ-

---

ಕಾರವಾರ ಜಿಲ್ಲೆಯಿಂದಿಗೆ ಶ್ರೀ. ಯಕಲಂತ ಶೃಂಬಕ ನಾಡಕರ್ಣಿ ಬಿ ಎ ಎಲ್ಎಲ್. ಬಿ ವಕೀಲರು ಸತ್ಯಾಗ್ರಹವನ್ನು ಸೇರಿದ್ದಾರೆಂದು ತಿಳಿದು ಆನಂದವಾಗುತ್ತದೆ.

ಬೆಳಗಾವಿಯಲ್ಲಿ ಪ್ರಮುಖರ ದಸ್ತಗಿರಿ.

—)(೦)(೦)(—

[ನಿನ್ನೆ ಮಧ್ಯಾನ್ನದಲ್ಲಿ ಬಂದ ತಾರು]

——(೦)—— —

ರವಿವಾರ ದಿನವು ಸಾಯಂಕಾಲದಲ್ಲಿ ಶ್ರೀ. ಗಂಗಾಧರರಾವ ಮೊದಲಾದವರು ಉಪ್ಪು ಮಾಡಿ ಮಾರಿದ್ದರ ಆರೋಪದಿಂದ ಪೋಲಿಸರು ಇವರನ್ನೂ ಉಪ್ಪು ಕೊಂಡದ್ದಕ್ಕೆ ಶ್ರೀ. ನಾರಾಯಣರಾವ ಜೋಶಿ ವಕೀಲ, ಶ್ರೀ. ದಾಬಡೆ ಮತ್ತು ಶ್ರೀ. ಬೀಡಕರರಾವ ಯಾಳಗಿಯವರನ್ನು ದಸ್ತಗಿರಿ ಮಾಡಿದ್ದಾರೆ. ನಾಲ್ವತ್ತು ಜನರು ಕಾಯದೆಭಂಗ ಮಾಡಿದ್ದರೂ. ನಾಲ್ವರನ್ನು ಮಾತ್ರ ದಸ್ತಗಿರಿ ಮಾಡಿರುವರು.

— —

ಮುಂಬಯಿಯಲ್ಲಿ ದಸ್ತಗಿರಿ

ಶ್ರೀ ನಾವನ್ನ ಮತ್ತು ಬಜಾಜ.

— (೦) —

ಮುಂಬಯಿಯಲ್ಲಿ ಸರಕಾರದವರು ಮಾನ್ಯರಾದ ಶ್ರೀ ನರವನ್ನ ಮತ್ತು ಕಾಯದೆಭಂಗ ನೋಡಲು ಹೋಗಿದ್ದ ಶ್ರೀ. ಜಮುನಾಲಾಲ ಬಜಾಜರನ್ನು ಹಿಡಿದರು. ಮಹಾರಾಷ್ಟ್ರದ ಸ್ವಯಂಸೇವಕರು ಹ್ಯಿಲಿ ಪಾರ್ಶೆಯಲ್ಲಿ ಉಪ್ಪಿನ ಕಾಯಿದೆಗಳನ್ನು ನಾಶ ಮಾಡಿದರು. ಸರಕಾರದವರು ಲಾಟ್ಬಳಿಕೆ ಪ್ರಾರಂಭ ಮಾಡಿ, ಅನೇಕರನ್ನು ಹಿಡಿದು ತೊಂದರೆ ಕೊಡುತ್ತಿದ್ದಾರೆ. ಹಿಡಿದಂಥ ಗುಜರಾಥಿ ಮುಂದಾಳುಗಳಿಗೆ ಭಾರೀ ಶಿಕ್ಷೆ ವಿಧಿಸುತ್ತಿದ್ದಾರೆ.

ದೇವಿ ಸರೋಜಿನಿಯವರ ಕಾಯದೆಭಂಗ.

——(೦)——

ಶ್ರೀ ಸ್ರೀ॥ ಸರೋಜಿನಿ ದೇವಿಯವರು ಮಹಾತ್ಮರ ಸತ್ಯಾಗ್ರಹಾಶ್ರಮದಲ್ಲಿರುವರು. ಮಹಾತ್ಮರನ್ನು ಹಿಡಿದ ಕೂಡಲೆ ಏ. ಆದಾಸ ಕಯಾಮಜಿ ಇವರ ಕರವಾಯಾ ನುಯಿಸೇ ಸಭೆಯದಕಾಣ ಇವರು ಕಾಯದೆಭಂಗ ಮಾಡುವರು.

ಪ್ಲೇಸ್ಕಾವುರ ಸೂರಕನು

ಅಹಮದಾಬಾದಿನಲ್ಲಿ ಸ್ನಾವುರಾಗಿರುವ ಹೆಣ್ಣುಮಕ್ಕಳಿಗೆ ದೇವರು ತಾಪನನ್ನು ದಕ್ಷಿಸಲಿ; ಎಂಬ ಗೀತವನ್ನೆನ್ನಲು ಹೇಳಿದರು. ಅವರು ಅನ್ನಲಿಲ್ಲ. ಕಾಂಗ್ರೇಜಿ ಯುನಿಯನ್ನ ಜಾಳ ನಿಶಾನೆಗೆ ಸಲಾಮು ಮಾಡಬೇಕೆಂದರು. ರಾಷ್ಟ್ರೀಯ ನಿಶಾನೆಯು ಹೊರ್ಗು ಬೇರೊಂದು ನಿಶಾನೆಗೆ ಸಲಾಮು ಹೊಡೆಯುವದಿಲ್ಲೆಂದವರೇ ಸುವಾರು ೫೦ ವಿದ್ಯಾರ್ಥಿನಿಯರು ಸ್ವಾವುಟಿಗೆ ರಾಜೀನಾಮೆ ಕೊಟ್ಟರು.

ಲಿಲ್ಲ. ಆಗ ಅವರು ಸಭೆಯಮುಂದೆ ಅಡ್ಡ ಮುಖ ಲಗಿದರು. ಜನರು ಅವಮಾನ ಎತ್ತಿಕೊಂಡು ಹೊರಗೆ ಬೈದರು. ಪುನಃ ಅಡ್ಡ ಮಲಗಿದರು. ಕೊನೆಗೆ ಜನರು ಇವರಿಗೆ ಮಾತಾಡಗೊಟ್ಟರು. ಸ ಪ್ರೋಕ್ಷ್ಮಮಂತಾಯರು ಸತ್ಯಾಗ್ರಹದಿಂದ ಜಿದ್ದಿಗೆದ್ದರು

——

ಸೊಲ್ಲಾಪೂರ ಮ್ಯುನಿಸಿಪಾಲಿಟಿಯು ಕಡೇರಿಯ ಮೇಲೆ ರಾಷ್ಟ್ರೀಯ ನಿಶಾನೆಯನ್ನೇರಿಸುವ ಸಮಾರಂಭವು ಪುಣೆಯ ಶ್ರೀ. ಭೋಪಟಕರರಿಂದ ನೆರವೇರಿಸಲ್ಪಟ್ಟಿತು. ಆರ್ಯಾಡಂದರ ವೈಲೆರಾಸಾಹೇಬನ ಮೇಲೆ ಕೊಲೆಯ ಆರೋಪವಿದ್ದರೂ, ಬ್ರಿಟಿಶ ಸರಕಾರಕ್ಕೆ ಇವರನ್ನು ಹಿಡಿಯುವ ಧೈರ್ಯವಾಗಲಿಲ್ಲ. ಏಕಂದರೆ- ಇವರಿಗೆ ಹಿಂದೆ ದ್ರವ್ಯ ಬಲ ಮತ್ತು ಮನುಷ್ಯ ಬಲವಿತ್ತು. ಅದೇ ಪ್ರಕಾರ ಮಹಾತ್ಮರಿಗೂ ಜನ ಧನ ಸಹಾಯವನ್ನಂಟುಮಾಡಿದರೆ- ಸ್ವರಾಜ್ಯ ಸ್ವಾತಂತ್ರ್ಯ ದೊರೆಯುವದೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಸೀಧ ನ್ಯಾಂಕದ ದಿಂಡಯಲ್ಲಿ ಉಪ್ಪಿಗೆ ಅನುಕೂಲವಾದ ಕ್ಷೇತ್ರವದೆ. ಇದರ ಹೊರ್ತು ಎರಡು ಸರೋವರಗಳುಂಟು. ಇಲ್ಲಿ ಜಗತ್ತಿಗೆಲ್ಲ ಇನ್ನೂರು ವರ್ಷ ಮತ್ತು ಹಿಂದುಸ್ಥಾನಕ್ಕೆ ೧೭೪೦ ವರ್ಷ ಉಪ್ಪು ಆಗುವಷ್ಟು ಅನುಕೂಲತೆಯುಂಟೆಂದು ಒಬ್ಬ ಯುರೋಪಿಯನ್ನ ಅಧಿಕಾರಿಯೇ ಹೇಳಿದ್ದಾನೆ.

——

ನೋಟೀಸು

ಗಂಗೀ ಕೋಮ ಬಸಪ್ಪಾ ಕುರುಬರ ಸಾ॥ ಬಾದ್ಯಾಳ ಹಾಲಿವಸ್ತು ಉಣ್ಣಿಕೇರಿ (ಕಲಘಟಗಿ) ಈಕೆಗೆ-

ಕಳಗೆ ಹೆಬ್ಬೆರಳಿನ ಗುರ್ತಾ ಮಾಡಿದ ಬಸಪ್ಪಾ ಯಲ್ಲಪ್ಪಾ ಕುರುಬರ ಸಾಕೀನ ಉಣ್ಣಿಕೇರಿ ಈತನ ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ

ನೀನು ನನ್ನ ಲಗ್ನದ ಹೆಂಡತಿಯಾಗಬೇಕು ಲಗ್ನವಾಗಿ ಮೂರು ವರ್ಷವಾಯಿತು ನೀನು ದೊಡ್ಡವಳಾಗಿ ಮನೆಗೆ ಬಂದು ಒಂದೂವರೇ ವರ್ಷವಾಯಿತು ಅವಾಡಕಾರ್ಯವಾಯಿತು ಆದರೆ ನೀನು ನನ್ನ ಮನೆಗೆ ಬಂದು ಬಾಳ್ವೆ ಮಾಡಲಿಲ್ಲಾ ನಿನ್ನ ತಂದೆ ಒಂದು ನಿನ್ನೂರಲ್ಲಿ ಎರಡು ವರ್ಷ ಇದ್ದನು ಈಗ ಸುಗ್ಗಿಯ ದೆಸೆಯಿಂದ ಧದಾಪೂರ ಅಥವಾ ಹೆಬಸೂರಿಗೆ ಹೋದಂತೆ ಕೇಳಕೇನೆ ನೀನುಹೀಗೆ ನಿನ್ನ ತಂದೆಯ ಬೆನ್ನು ಹತ್ತಿ ಹೋಗುವದನ್ನು ಕಂಡು ನಾಲ್ಕು ಜನ ಹಿರಿಯರನ್ನು ಕರಿಕೊಂಡು ನಿನ್ನನ್ನು ಕರಿಯಿಲಿಕ್ಕೆ ಬಂದರೆ- ನಿನ್ನ ತಂದಿ ಸೊಕ್ಕಿನಿಂದ-ನಾನು ನಿನ್ನ ಮಗಳನ್ನು ಕಳಿಸುವದಿಲ್ಲಾ ನಿನಗೆ ಬಾಳವೆ ಮಾಡಿಸುವದಿಲ್ಲಾ ಮತ್ತು ಎಡನೇ ಕಡಿಗೆ ಉಡಿಕೆ ಮಾಡಿ ಕೊಟ್ಟಿಕೇನೆ ಅಂತಾ ಅಂದನು ಯಾರಾದರೂ ಕೇಳಿದರೆ- ಇದೇ ಪ್ರಕಾರ ಅನ್ನು ಕತ್ತಾನೆ ಆದ್ದರಿಂದ ನಿನಗೆ ಈ ನೋಟೀಸು ಕೊಡಬೇಕಾಯಿತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನಾನು ನಿನ್ನ ಮೈಮೇಲೆ ಹಾಕಿದ ದಾಗೀನಿಗಳು ಅಂದರೆ- ಬಂಗಾರ ಬಳೇ ಎರಡು ಕೊಲಿ ಏದು, ಕಿ॥ ರೂ॥ ೧೦೦ (೨) ಬಂಗಾರದ ಪದಕದ ಸರಾ ಒಂದು ಕಿ॥ ರೂ॥ ೨೦ (೯) ಕರ್ಣಫೂಲು ಒಂದು ಜೋಡು ಕಿ॥ ರೂ॥ ೬ (೪) ಯಲ್ಲಮ್ಮನ ಸಾದದ ಸರಾ ಕಿ॥ ರೂ॥ ೧೫ (೫) ಬೆಳ್ಳಿ ಬಂದಿ ಜೋಡು ಕಿ॥ ರೂ॥ ೨೦ (೬) ಸಡದೊಳಗಿನ ಬೆಳ್ಳಿ ಪಟ್ಟಿ ಕಿ॥ ರೂ॥ ೧೨ (೭) ತೆಂಪು ಶೆನೆ ತಿಂಗಿದ ಪೀರಿ ಕಿ॥ ರೂ॥ ೩೨ (೮) ಅಪಡದ ಸೀರಿ ಕಿ॥ ರೂ॥ ೨೨ ಇಪ್ಪು ತಕ್ಕೊಂಡು ನನ್ನ ಮನೆಗೆ ಬಾಳವೆ ಮಾಡಲಿಕ್ಕೆ ಬರಬೇಕು ಇದಕ್ಕೆ ತಪ್ಪಿದರೆ- ನಿನ್ನ ಕಬುಜಾ ಹ್ಯಾಗು ದಾಗೀನಗಳ ದೆಸೆಯಿಂದ ಕಾಯದೆಪೀರ ಇಲಾಜ ಮಾಡಿಸೆನು ನೀನು ನಿನ್ನ ತಂದೆಯ ಮಾತು ಕೇಳಿ ಯಾರನ್ನಾದರೂ ಉಡಿಕೆ ಮಾಡಿಕೊಂಡರೆ- ನಿನ್ನ ಮೇಲೆ ಉಡಿಕೆಗೆ ಮದ್ದತಾಗುವ ನಿನ್ನ ತಂದೆಯ ಮೇಲೆ ಮತ್ತು ನಿನ್ನ ಉಡಿಕೆ ಮಾಡಿಕೊಳ್ಳುವವನಮೇಲೆ ಎಂದಂ ಫೌಜದಾರಿಯಲ್ಲಿ ಇಲಾಜ ಮಾಡಿಸೆನು ಗಂಡನು ಸೋಡ ಪತ್ರ ಕೊಟ್ಟ ಹೊರ್ತು ಹೆಂಡತಿಗೆ ಅಂಥ ಅಧಿಕಾರ ಹುಟ್ಟುವದಿಲ್ಲ ಗಂಡ ಹೆಂಡರ ಸಂಬಂಧ ತಪ್ಪುವದಿಲ್ಲ ಕಾರಣ ಮುದ್ದಾಮ ಈ ಕಲಮು ನಿನಗೆ ತಿಳಿಸಿದ್ದೇನೆ ಕಾರಣ ನೀನು ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಯಾವತ್ತು ದಾಗೀನಿ ಮತ್ತು ಅರಿವೆ ತಕ್ಕೊಂಡು ಬರಬೇಕೆಂದು ತಿಳಿಸಿತ್ತೇನೆ ತಾ॥ ೬ ಎಪ್ರಿಲ ೧೯೩೦ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಬಸಪ್ಪಾ ಯೆಲ್ಲಪ್ಪಾ ಕುರುಬರ ಈತನ ಕೈದು ಇರುತ್ತದೆ

——

ಜಾಹೀರ ನೋಟೀಸ

ಫಕೀರಪ್ಪಾ ತಂದಿ ಗೋವಿಂದಪ್ಪಾ ಮಡಿವಾಳ ಸಾ॥ ಹಲ್ಯಾಪೂರ ತಾಲೂಕ ಗದಗ ಇವರಿಗೆ—

ನಾನು ಕೊಗೆ ಸಹಿ ಮಾಡಿದ ವೆಂಕವ್ವಾ ಮಡಿವಾಳ ಸಾ॥ ಹಲ್ಯಾಪೂರ ತಾಲೂಕ ಗದಗ ಹಾಲಿವಸ್ತು ಬೆಂಗೇರಿ ತಾಲೂಕ ಹುಬ್ಬಳ್ಳಿ ಪುನಃ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ

ನೀನು ನನ್ನ ಲಗ್ನದ ಗಂಡನಿದ್ದು ನನ್ನನ್ನು ಬಿಟ್ಟು ಅಜಮಾಸ ೨-೩ ವರ್ಷವಾಗುತ್ತಾ ಬಂತು ಇಲ್ಲಿಯವರೆಗಾದರೂ ನನ್ನನ್ನು ಕರಕೊಂಡು ಹೋಗಿ ಸುರಕ್ಷಿತ ಬಾಳ್ವೆ ಮಾಡಿಸಿಕೊಳ್ಳಲಿಲ್ಲಾ ನೀನು ಬಿಟ್ಟಲಾಗಾಯತು ನನ್ನ ಹೊಟ್ಟೆಯು ಬಿರ್ಚಿಗೂ ನುತ್ತು ಅರಿವೆ ಅಂಡಿಗೂ ಎರಡು ನೂರಾ ಏನಿಲ್ಲ ತಿಂಗಳ ರೂಪಾಯಿ ದೇನೆ ಆಗಿರುವದು. ಸದರ ದೇನೆಯನ್ನು ತೀರಿಸುವದಕಿಂತಿಂದ ಮತ್ತು ನನ್ನ ಜೀವಕ್ಕೆ ಯಾವ ತರದ ಅಪಾಯು ಮಾತಿಕ್ಕಿಲ್ಲಾ ಅಂಬುವ ಬಗ್ಗೆ ಖಾತ್ರಿಯುಳ್ಳ ಪಂಚರ ಜಿಮ್ಮೆ ಮೀನು ಕೊಡುವದರದೆಸೆಯಿಂದ ತಾರೀಖು ೨೨-೩-೧೦ನೇ ದಿವಸ ನಿನಗೆ ಜಾಹೀರ ನೋಟೀಸ ಇದೇ ಪತ್ರದಲ್ಲಿ ಕೊಟ್ಟಿದ್ದೆ ಆದರೆ ನಿನ್ನ ಹೆರು ತಪ್ಪು ಬಿದ್ದು ಇನಕಾಂತಾದದ್ದು ತಿಳಿತದೆ ಆದ್ದರಿಂದ ಈ ಸಾರೆ ಯುಸ್ತ ಮಾಡಿಸಿ ಕಳಸೀನಿ ಕಾರಣ ಇದು ವಟ್ಟಿದ ಅದಿವಸಗಳಲ್ಲಿ ಮೇಲಿನಂತೆ ನನ್ನ ದೇನೆ ತೀರಿಸಿ ಮತ್ತು ಯೋಗ್ಯ ಪಂಚರ ಜಿಮ್ಮೀನ ಕೊಟ್ಟು ಕರಕೊಂಡು ಹೋಗದಿದ್ದರೆ ಇದೇ ಸೋಡಚೀಟಿ ಅಂತಾ ತಿಳಿಯಬೇಕು ಮುಂದೆ ನಾನು ಉಡಿಕೆ ವನ್ನೆರೆ ಮಾಡಿಕೊಂಡು ಹೋದಲ್ಲಿ ನಿನ್ನ ಯಾತರದು ಯಾವತರದ್ದು ಕಂಟೆತಗಾದಿ ಸಡೆಯಲಿಕ್ಕಿಲ್ಲಾ ತಿಳಿಯುವದು ತಾರೀಖು ೬-೪-೧೯೩೦ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತಾ ವೆಂಕವ್ವೆ ಮಡಿವಾಳ ಈಕೆಯು ಮಾಡಿದ್ದು ಅದೆ

ತಾಜಾ ಕಲ್ಮ-

ಅಜಮಾಸು ೭-೮ ತಿಂಗಳ ಹಿಂದೆ ನನಗೂ ನಿನಗೂ ಸೋಡಪತ್ರ ಕೊಡಿಸಿ ಇಬ್ಬರ ಸಂಬಂಧವನ್ನೂ ತಪ್ಪಿಸಿದ ಬಗ್ಗೆ ಹಲ್ಯಾಪೂರ ಪಂಚರು ನಿನ್ನಿಂದ ನಿನಗೆ ನಿನ್ನಿಂದಾ ನನಗೆ ಸೋಡಪತ್ರ ಒರಿಸಿಕೊಟ್ಟಿರುತ್ತಾರೆ ಅವತ್ತಿನಿಂದಾ ನಮ್ಮ ನಿಮ್ಮ ಸಂಬಂಧ ತಪ್ಪಿಬೆ ವರ್ತಮಾನ ಪತ್ರದಲ್ಲಿ ಜಾಹೀರ ಮಾಡಬೇಕೆಂದು ನನ್ನ ಹಿತೈಷಿಗರು ಮತ್ತು ಉಡಿಕೆಮಾಡಿಕೊಳ್ಳುವ ಮನೆತನದವರು ಹೇಳಿದ್ದರಿಂದಾ ಈ ನೋಟೀಸು ಜಾಹೀರ ಮಾಡಿದ್ದೇನೆ ತಿಳಿಯುವದು ತಾರೀಖು ಸದರ

ಈ ಎಡಗೈ ಹೆಬ್ಬೆರಳಿನ ಗುರ್ತಾ ವೆಂಕವ್ವೆ ಮಡಿವಾಳ ಈಕೆ ಮಾಡಿದ್ದು ಅದೆ

——

ಸಮಯ-

—(೦)—

ವಿ. ರ್. ಶ್ರೀನಿವಾಸಯ್ಯಂಗಾರ್, ಗೌತವೆ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ್] ಕೊಳ್ಳೇಗಾಲ ಇವರಿಗೆ ಬರೆದು ತಿಳಿಕೊಳ್ಳಿರಿ.

ಈ ಪತ್ರವನ್ನು ಆಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧರವಾಡದಲ್ಲಿರುವ ತಮ್ಮ ನಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ವಿಲೆ ಅಧಿಕ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ) ಧಾರವಾಡ ಗುರುವಾರ ತಾರೀಖು ೧೦ ನೇ ಎಪ್ರಿಲ ೧೯೩೦ (ಸಂಚಿಕೆ ೮೮

Incorporated in S. S.) (Registered in England)

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLANS.

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯೂರನ್ಸ ಕಂ. ಲಿ.

ವಾರ್ಷಿಕ ಬೋನಸುಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಆಸದುರ್ಭೆತೆಯೆಲ್ಲಿಯೂ ಕಾನಾಗಿ ರದ್ದಾಗದ ಪಾವತಿಯ ಪಾಲಿಸಿಯ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತವೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ.

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಸ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗೆಯು ಎಂಟು ಲಕ್ಷದ ಮೇಲುಂಟು. ಹಳು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಪ ಮಾಡಲ್ಪಡುವದು. ಕಾಷೀಮ ಮತ್ತು ಬೇರೆ ಕರದ ಡಿವಾಜಿಟಗಳಿಗೆ ಜನ್ಮಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳ ಬೇಕು.

ಮಾಳ್ಯರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟ

ವಿಜಯದ ವರ್ಗಣಿದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ ರೂ. ೧೨-೮-೦

೬ ,, ೬-೦-೦

೩ ,, ೩-೪-೦

ವಾರ ಪತ್ರಿಕ್ಕೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ ಬರೆದು ತಿಳಿಸಿಕೊಳ್ಳಿರಿ.

ಮ್ಯಾನೇಜರ ವಿಜಯ

ವಿಜಯ.

ಕೋಟ್ಯಾ ವಿಕ್ರಮ ವರ್ಧನಾಯ ಬ್ರಾಹ್ಮಣ ಸಿದ್ಧಂ ಗತಿ

"ಅವಿಚ್ಛಿನ್ನ ಸಂತಾನ"

ಸ್ತುತಿಯಲ್ಲಂಟಾದ ಬಲವತ್ತರವಾದ ರಾಜಕೀಯ ಪರಿಸ್ಥಿತಿಗಾಗಿ ರಾಜೀನಾಮೆ ಕೊಟ್ಟದ್ದು ಸ್ತುತ್ಯವೇ ಆಯಿತು. ಇವರು ತಮ್ಮ ರಾಜೀನಾಮೆಯಲ್ಲಿ ಪಂಡಿತ ಮಾಲವಿಯಾ, ಪ್ರಕಾಶ ಮುಂತಾದಂತೆ ಖಂಡತುಂಡಿನ ಪತ್ರ ಬರೆದಿಲ್ಲ. " ಈ ಆಯುದಿಭಂಗದ ಜಲವಳಯಲ್ಲಿ ನಾನೊಂದು ವೇಳೆ ಸೇರಿದರೆ- ನನಗೆ ಸಿಮಲಾದಲ್ಲಿ ಮಂಜೆ ಕೊಡುವ ಆಸೆಂಬ್ಲಿಗೆ ಒಲಿಕ್ಕಾಗದು. ಒಂದು ವೇಳೆ ನಾನು ಕಾಯುದಿಭಂಗದಲ್ಲಿ ಸೇರಿದ್ದರೆ- ಮನೆಮಾರ್ತೆಯ ಸಂಬಂಧವಾಗಿ ನನಗೆ ಸಿಮಲಾಕ್ಕೆ ಬರಲಿಕ್ಕಾಗುವದಿಲ್ಲೆಂದು " ನಮ್ಯಾಸವನ್ನು ಮಾಡಿದ ರಾಜೀನಾಮೆ ಬರೆದ ಪತ್ರವನ್ನು ಲಾರ್ಡ ಆಯರ್ವಿನ ಸಾಹೇಬರಿಗೆ ಕಳಿಸಿದ್ದಾರೆ. ಈ ಅದ್ಲಂಡ ಮುದ್ದಂಡ ವಿಚಾರ ಮಾಡಿದ್ದರೂ ಶ್ರೀ ಕೇಳಕರರು ಸತ್ಯಾಗ್ರಹದಲ್ಲಿ ಧುಮುಕಿ, ಆಜ್ಞಾಪತ್ರವನ್ನು ಅನುಭವಿಸಿ ಬರುವರೆಂಬುದೇ ಖಂಡಿತ. ಹಿಂದಿನ ಅಸಹಕಾರದಲ್ಲಿ ಇವರು ತಮ್ಮ ಮಯ್ಯುಳಿಸಿಕೊಂಡರೂ ಇವರ ಹೆಂಡತಿಯು ಗಂಡಂಗದ ಮುಂದೆ ಪಿಕೇಟಿಂಗ ಮಾಡಿ, ದಂಡಶಿಟ್ಟರಕ್ಕಳಿ ಬಿಸಾವೆ ರಾಷ್ಟ್ರೀಯ ಮುಂದಾಳ ತೆಂಬ ಪ್ರತಿಯೊಬ್ಬನು ಕಾಯದಿಭಂಗ ಮಾಡಿ, ತಪ್ಪ ಪುಸ್ತೆಯನ್ನು ಕಳಕ್ಕಳ್ಳಿದಿದ್ದರೆ- ಜೇಡಿ ಮತ್ತು ಪುಳ್ಳಿನಿಸಿಸಿಕೊಳ್ಳುವ ಹೊತ್ತು ಒಂದು ಯಾವಜ್ಜನ್ಮ ಹೇಡಿ, ಕೈಲಾಗದವ, ಪುಕ್ಕ ದೇಶದ್ರೋಹಿ ಎಂದೆನಿಸಿಕೊಳ್ಳುವದಕ್ಕಿಂತ ಕಾರಾಗೃವಾಸವನ್ನನುಭವಿಸಿ ಬಂದರೆ ಮೇಲೆ ಜಾಗ್ರತ್ತದೆ. ಶ್ರೀ. ಕೇಳಕರರು ಕಾಯದಿಭಂಗ ಮಾಡಿ, ಕಾರಾಗವಾಸಿಯಾದ ವರ್ತಮಾನ ಕೇಳಲಿಕ್ಕೆ ಬಹಳ ದಿವಸಗಳು ದೇಕಾಗಲಾರವು.

ಗುಜರಾಥದ ತುಂಬ ಕಾಯದಿಭಂಗ

—:-*-:—

ಸರ್ದಸೇನಾನಿಯು ಫಾಯರ ಎಂದು ದಂಡಾಳುಗಳಿಗೆ ಅಪ್ಪಣೆಮಾಡಿದ ಕೂಡಲೆ- ಒಮ್ಮೆಯಲೆ ಗುಂಡಿನ ಮಳೆ ಸುರಿಯುವಂತೆ, ಮಹಾತ್ಮರು ಕಾಯದಿಭಂಗ ಮಾಡಿ, ನಿಮ್ಮ ಸತ್ಯಾಗ್ರಹದ ತೋಪು ಹೇಡಿಯಲಿಕ್ಕೆ ಸರ್ವ ಸ್ವತಂತ್ರರಿರುತ್ತೀರೆಂದು ಅಪ್ಪಣೆ ಕೊಟ್ಟ ಕೂಡಲೆ- ಗುಜರಾಥದ ನಾಯಕ-ಉಪನಾಯಕರು ಸತ್ಯಾಗ್ರಹ ಪ್ರಾರಂಭ ಮಾಡಿದರು. ಇವರಲ್ಲಿ ಬಹುತೇಕ ಜನರು ವಿಂಗಾಳುವಾಗಿದ್ದಾರೆ. ಮಹಾತ್ಮರ ಚಿಂಜೇಲನಾದ ಶ್ರೀ. ರಾಮದಾಸನೂ ರಣಾಂಗದಲ್ಲಿ ಸಡ್ಡು ಹೊಡೆದು ನಿಂತನು. ಕೌನ್ಸಿಲ ಮೆಂಬರರಾಗಿ ರಂಜೀನಾಮೆ ಕೊಟ್ಟಿದ್ದ ವಣಿಲಾಲ ಕೋರಾರಿಯವರೂ ಸರಕಾರದ ಅತಿಥಿಯಾದರು. ಇವರು ಕಾಯದಿಭಂಗ ಮಾಡಿದ ರೀತಿಯು ನೋಡಿದ ಸುದ್ದಿಯಾಗಿರುವದರಿಂದ ಮಾತಿಗಾಗಿ ಕೆಲವನ್ನು ಇದರಡಿ ಕೊಡುತ್ತೇವೆ

ಏ. ವಣಿಲಾಲ ಕೋರಾರಿ ಮೊದಲಾದ ಏಂ ಜನ ಸ್ವಯಂಸೇನಕರು ಸಮುದ್ರದ ದಂಡೆಯಲ್ಲಿಯ ಉಪ್ಪು ತಕ್ಕೊಂಡು ಉಗೆಂಡಿ ಹಶ್ತಿ, ವಿರವಗಾವಿಗೆ ಒಂದು. ಇದು ಹೆಸರಾದ ಊರು ಹಿಂದಿನ ಅಸಹಕಾರದಲ್ಲಿ ಇಲ್ಲಿಯ ಒನೆು ಕೋರ್ಟು ಕಛೇರಿ ಸುಟ್ಟು ಹಾಕಿದ್ದರು. ಹಾಗೇನೂ ಈಗಾಗಲಿಲ್ಲ. ಇವರು ಸ್ಟೇಶನಕ್ಕೆ ಬಂದ ಕೂಡಲೆ, ಪೋಲೀಸರು ಇವರನ್ನ ಬಂಧಿಸಿ, ನಿಮ್ಮ ಹತ್ತರಿದ್ದ ಉಪ್ಪು ಕೊಡಿರೆಂದರು. ಕೊಡುವುದಿಲ್ಲೆಂದ ಕೂಡಲೆ- ಜಪಾನ್ನು ಹಿಡಿದರು. ಮ್ಯಾಜಿಸ್ಟ್ರೇಟು ಕೋರಾರಿಯವರಿಗೆ ಇರು ವಾರಗಳ ಶಿಕ್ಷೆ ವಿಧಿಸಿದರು. ಇವರು ಕಂದ ಉಪ್ಪನ್ನು ಮನೆಯವರು ಸ್ವಯಂಸೇವಕರಲ್ಲಿ ಹಂಚಿದರು. ಬಾಯಿಂತಿಕೆಯಿಂದ ತಕ್ಕೊಂಡ ಹೊಕ್ಕ ಅದನ್ನು ಪೋಲೀಸರ ವಶಮಾಡತಕ್ಕದ್ದಲ್ಲೆಂದು ಕಡ್ಡಾಯವಾಗಿ ಗೊತ್ತು ಮಾಡಿದ್ದರು. ಆ ಪ್ರಕಾರ ಪೋಲೀಸರು ಇವರ ಉಪ್ಪನ್ನು ಕಸ ಕೊಂಡರು.

ಮಹಾತ್ಮರ ಪುತ್ರರಾದ ಶ್ರೀ ರಾಮದಾಸರು ಮುನ್ನೂರು ಸ್ವಯಂಸೇವಕರಿಂದಿಗೆ ಜೋರಾಸಿ ತಾಲೂಕಿನ ಧೀಮರಾಡವೆಂಬ ಗ್ರಾಮದಲ್ಲಿ ಉಪ್ಪಿನ ಉಗ್ರಾಣಕ್ಕೆ ಹೋಗಿ ಅಲ್ಲಿಯ ಳಲ ಮಣ ಉಪ್ಪು ತಕ್ಕೊಂಡು, ಎಲ್ಲಾ ಹಸ್ತಲಂಟಿಯವರಿಗೆ ಹಂಚಿ ಕೊಟ್ಟರು. ಮತ್ತು ಅಲ್ಲಿ ನೆರೆದಿದ್ದ ಅಷ್ಟೇ ಜನ ಪ್ರೇಕ್ಷಕರಿಗೂ ಹಂಚಿ ಈ ವರ್ತಮಾನವನ್ನು ಅಲ್ಲಿಯ ಗಾಡನಿಗೆ ತಿಳಿಸಿದರು. ಗಾಡನು ಪೋಲೀಸರಿಗೆ ರಿಪೋರ್ಟು ಮಾಡಿದನು. ಪೋಲೀಸ ಬಹಾದ್ದೂರರು ಬಂದು, ಶ್ರೀ ರಾಮದಾಸ ಮತ್ತು ಬೇರೆ ಮೂವರನ್ನು ಹಿಡಕೊಂಡು ಹೋದರು. ಉಳಿದವರನ್ನು ಹಿಡಿಯಲೇ ಇಲ್ಲ. ಇಷ್ಟು ಜನರನ್ನು ಒಮ್ಮೆಯಲೇ ಕುರಂಗಕ್ಕೆ ಸೈಯುವದಾದರೆ ಅಲ್ಲಿ ಸ್ಥಳವೆಲ್ಲುಂಟು ? ಅದ್ದರಿಂದ ಮುಂಡರೆಂಬವರನ್ನು ಹಿಡಿದು, ಉಳಿದವರನ್ನು ಬಿಟ್ಟು ಬಿಡುವರು

ಬಾರಡೋಲಿಯ ಸತ್ಯಾಗ್ರಹಿಗಳು ಬೇರೊಂದು ರೀತಿಯಿಂದ ಪೋಲೀಸರ ಸಮಾಚಾರ ತಕ್ಕೊಂಡರು. ಇವರು ವಖಾರದಲ್ಲಿಯ ಉಪ್ಪು ತಕ್ಕೊಂಡು, ಅಲ್ಲಲ್ಲಿ ಅದರ ಗುಂಪಿಹಾಕಿ ಒಂದೊಂದು ಮೇಲೆ ಒಬ್ಬೊಬ್ಬ ಸತ್ಯಾಗ್ರಹಿಯು ಕೂತನು. ಪೋಲೀಸರು ಬಂದು ಒಬ್ಬೊಬ್ಬನನ್ನೇ ಅನಾಸಾ ಎತ್ತಿಕೊಂಡು ದೂರ ಕೂಡಿಸಿ, ಇವನ ಮೇಲೆ ಕಾವಲಿಡುವರು. ಈ ಸತ್ಯಾಗ್ರಹಿಗಳನ್ನೆಲ್ಲ ತಮ್ಮ ವಶ ಮಾಡಿಕೊಳ್ಳುವ ತನಕ ಪೋಲೀಸರಿಗೆ ಕಣ್ಣೀರು ಕವಾಳಕ್ಕೆ ಬಂದಿರಬಹುದು.

ಹಾಯಕೋರ್ಟಿನಲ್ಲಿ ಸರದಾರ ಶಿವಲಿಂಗಪ್ಪನವರ ಪ್ರಕರಣ

——)(o)(——

ಹೋದ ವಾರದಲ್ಲಿ ಮುಂಬಯಿ ಹಾಯಿಕೋರ್ಟಿನಲ್ಲಿ ಸರದಾರ ಶಿವಲಿಂಗಪ್ಪನವರ ಅಪೀಲಿಯ ಪ್ರಕರಣವು ವಿಚಾರಣೆಗೆ ಹೊಂಟತು. ಪೋಲೀಸರು ತಮ್ಮ ಮೇಲೆ ಹಾಕಿದ ಈನಿನ ಅರೋಪದ ಚಾರ್ಜಶೀಟು ಸರಿಯಾಗಿರುವದಿಲ್ಲೆಂದು ಅಪೀಲಿಯ ಮುಖ್ಯ ವಿಷಯವಾಗಿತ್ತು. ಜಡ್ಡಿಗಳು ಚಾರ್ಜಸೀಟು ತಿದ್ದಿರುತ್ತದೆಂದು ತೀರ್ಪು ಹೇಳಿದರು.

ಇದರಿಂದ ಅವರುಮೇಲಿನ ಪ್ರಕರಣ ತೀರಲಿಲ್ಲ. ಪೋಲೀಸರು ಪುನಃ ಹೊಸದಾಗಿ ಚಾರ್ಜಸೀಟು ಹಾಕುವರು. ಹಿಂದಕ್ಕೆ ಅಮ್ಮಿನಭಾವಿಯ ರಾಮನಾಥೇಶ ಪಂಚಾಪತಿಯವರ ಮೇಲಿನ ಮೊದಲಿನ ಚಾರ್ಜಸೀಟು ಬದಲಾಗಿ ಮತ್ತೊಂದು ಚಾರ್ಜಸೀಟು ಹಾಕಲ್ಪಟ್ಟಿತಷ್ಟೇ; ಅದೇ ಪ್ರಕಾರ ಶಿವಲಿಂಗಪ್ಪನವರ ವಿಷಯವಾಗಿಯೂ ಇರುತ್ತದೆ.

ನಿಷ್ಪಾಣಿಯು ವ್ಯಾಪಾರದ ಪಡವಣಿಯು. ಅಲ್ಲಿ ಕಾಯದಿಭಂಗಕ್ಕಾಗಿ ಜನಸಹಾಯ ಧನಸಹಾಯದ ಸಿದ್ಧತೆ ನಡೆದಿದೆ. ೨೧ ಜನರು ಸ್ವಯಂಸೇವಕರಾಗಿರುವರು. ಇನ್ನೂ ಕೆಲವರು ಇವರನ್ನು ಹಿಂಬಾಲಿಸುವರು. ಕೊಲ್ಲಾಪೂರದಂತೆ ಎಲ್ಲ ಜಾತಿಯವರಿದ್ದು, ರಾಘವಾಚಾರ್ಯ ತೇದಾಳ ಮತ್ತು ಮಧ್ವಾಚಾರ್ಯ ಟೋಪಣಿ ಎಂಬೀರ್ವರು ವೈದಿಕ ಬ್ರಾಹ್ಮಣರೂ ಸೇರಿದ್ದಾರೆ.

ಕಾಯ್ದೆಭಂಗ.

ಮಹಾತ್ಮರು ಆಟಗ್ರಾಮಕ್ಕೆ ಹೋಗುವರು-

ದಂಡಿಯು ಹತ್ತಿರವೇ ಆಟಗ್ರಾಮವುಂಟು. ಇಲ್ಲಿ ಪೋಲೀಸರು ಸತ್ಯಾಗ್ರಹಿಗಳನ್ನು ಹಿಡಿಯಲು ಪರಾಕ್ರಮ ತೋರಿಸುತ್ತಿದ್ದಾರೆ. ದಂಡಿಯಲ್ಲಿ ತಮ್ಮನ್ನು ಕೇಳದಾದ್ದರಿಂದ, ಇವರು ಆಟಕ್ಕೆ ಹೋಗಿ, ಕಾಯ್ದೆಭಂಗ ಮಾಡುವರು.

ಹಡುಗರು ಮತ್ತು ಹೆಂಗಸರು-

ಆಟದಲ್ಲಿಯ ಉಪ್ಪನ್ನು ಜಪ್ತಮಾಡಿ ಪೋಲೀಸರು ವಯಸ್ಸಾದವರ್ಕೆ ಅಡ್ಡೀ ಮಾಡಬೇಕೆಂದು ಸತ್ಯಾಗ್ರಹಿಗಳು ಇವರ ಮುಂದೆ ಹುಡುಗರು ಮತ್ತು ಹೆಂಗಸರನ್ನು ಆಡ್ಡ ಕೂಡ್ರಿಸಬೇಕೆಂದು ಅಥವಾ ಮಲಗಿಸಬೇಕೆಂದಿದ್ದಾರೆ.

ಕಾಮದಾರರ ದುರವಸ್ಥೆ-

ಉಪ್ಪಿನ ರಣಮಂಡಲದಲ್ಲಿರುವ ಸರಕಾರೀ ಕಾಮದಾರರ ಅವಸ್ಥೆಯು ನೀಕ್ಕೂ ಬೇಡಾಗಿರೆ. ಇವರಿಗೆ ಊರೊಳಗೆ ಇಳಿಯಲು ಸ್ಥಳ ಕೊಡುವದಿಲ್ಲ. ನೀರು ಕೊಡುವಾಲ್ಲ. ಕಾದುರೆಯೂ ಇವರ ಸಂಪರ್ಕದಿಂದ ಕೆಡುವದರಿಂದ ಅದಕ್ಕೆ ಮೇವು ಮಿಡಚಿ ಕೊಡದಾರದಾರೆ. ಕಾಮದಾರರು ತಮ್ಮ ಲಾಟದಲ್ಲೇನು ಬರೆದಿಸೆಂಬದನ್ನು ತಾವೇ ನೋಡಿ ಕೊಳ್ಳಕ್ಕದ್ದು.

ಏನ ನಾದಾಸ ಮತ್ತು ಪ್ರಕಾಶನು-

ಅಸೆಂಬ್ಲಿಯ ಆಕಪಿತರು, ಜನಾರ್ದನಪುಲ್ಲಿ ಫಜೀತಿಹೊಂದಿದ ರಾಜೆಯು ಶ್ರೀ. ಜವಾಹರಲಾಲ ಮತ್ತು ಮದ್ರಾಸಿನ ಶ್ರೀ. ಪ್ರಕಾಶನು ಇವರು ಕಾಯ್ದೆಭಂಗಕ್ಕೆ ಹೆರಟಿದ್ದರು. ಮಹಾತ್ಮರ ದಾರಿ ಕಪ್ಪಿದಂದಿದ್ದರು. ಈಗ ಇವರೀರ್ವರು ಪತ್ತಾಸ್ತಾಪಪಟ್ಟ ಅದರ ಪ್ರಾಯಶ್ಚಿತ್ತವೆಂದು ತಾವು ಕಾಯ್ದೆಭಂಗದ ಪುರಸ್ಕರ್ತರಾಗಿದ್ದಾರೆ.

ಪೋಲೀಸರು ಒಲೆ ಕೆಡಿಸಿದರು-

ಮುಂಬಯಿ ಹತ್ತರದ ಹ್ವಿಲಿವಾರ್ಲೆ, ಮತ್ತು ಗುಜರಾಥದ ದಂಡೆಗುಂಟ ಅನೇಕ ಊರುಗಳಲ್ಲಿ ಹಾಗು ಮತ್ಸಲಿಪಟ್ಟಣದ ಪ್ರದೇಶದಲ್ಲಿ ಸ್ವಯಂಸೇವಕರು ಉಪ್ಪು ಮಾಡಲೋಸಗ ಕಟ್ಟಿದ ಒಲೆಗಳನ್ನು ಪೋಲಿಸರು ಕೊಡ್ಲೆ, ಗುಂಡ್ಲಿಗಳಿಂದ ಕೆಡವಿ ನಿಲಯವು ಮಾಡಲಾರಂಭಿಸಿದ್ದಾರೆ. ಇದೇನು ಹಿಂಸೆಯೋ! ಅಹಿಂಸೆಯೋ!

ರಣವೀರ ದೇಶಪಾಂಡೆ ಗಂಗಾಧರರಾಯರ ವೀರ ಸಂದೇಶವು

ಕರ್ನಾಟಕದ ನನ್ನ ಬಂಧುಭಗಿನಿಯರೇ,

ಕರ್ನಾಟಕ ಸತ್ಯಾಗ್ರಹಮಂಡಲದ ಅಧ್ಯಕ್ಷನನ್ನಾಗಿ ನಕಾಡಿ ನೀವು ನನಗೆ ಈ ಸತ್ಯಾಗ್ರಹ ಸಮರದಲ್ಲಿ ಅಗ್ರಪಣನವನ್ನು ಕೊಟ್ಟಿದ್ದಿರಿ. ಸರಕಾರದವರು ದೇಶಸೇವಕನಾದ ನನಗೆ ಬೇನೆ ಮಾನ-ಮುಯರ್ಾದೆಗಳನ್ನು ಕೊಡದಿದ್ದರೂ ನನ್ನನ್ನು ಕರ್ನಾಟಕದಲ್ಲಿ ಎಲ್ಲರಿಗಿಂತಲೂ ಮೊದಲು ಸೆರೆ ಹಿಡಿದು ಅಗ್ರ ಮಾನವನ್ನು ಕೊಟ್ಟಿದ್ದಾರೆ. ಈ ಸಮಂಗದಲ್ಲಿ ಕರ್ನಾಟಕದ ನನ್ನ ಬಂಧು ಭಗಿನಿಯರು ಈ ಧರ್ಮಯುದ್ಧದಲ್ಲಿ ಸೇರಿ, ನಮ್ಮ ಶಾಂತಿಸೇನೆಯ ಅಧಿನಾಯಕನಾದ ಮಹಾತ್ಮಾ ಗಾಂಧಿಯವರಿಗೆ ಸಂಪೂರ್ಣ ಸಹಾಯ ಮಾಡುವಿರೆಂದು ನಾನು ನಂಬಿದ್ದೇನೆ. ಕರ್ನಾಟಕದಲ್ಲಿಯು ವೀರ ತನದ ಝರಿಯು ಇನ್ನೂ ಒಣಗಿಲ್ಲವೆಂಬುದನ್ನು ಸಿದ್ಧಪಡಿಸುವ ಶುಭಸಮಯವು ಈಗ ಬಂದಿದೆ. ಏಳಿರಿ, ತರುಣ ವೀರರೇ, ಏಳಿರಿ. ರಣಗಾಳಿಯನ್ನು ಊದಿ, ಈ ಅಸುರೀ ಸಾಮ್ರಾಜ್ಯವನ್ನು ಮಣ್ಣು ಗೂಡಿಸಲಿಕ್ಕೆ ಸಿದ್ಧರಾಗಿರಿ.

ದೇಶಪಾಂಡೆ ಗಂಗಾಧರ.

ಮಹಾತ್ಮರು

ಪೋಲೀಸರ ಹುಸಾರು ಪಾರಿಯುವರು

ಮತ್ತು

ಅವರಿಗೆ ಅಸಗೆಳ್ಳಲಾರರು

ಮುಖಾತ್ಮರು ಆಟಗ್ರಾಮಕ್ಕೆ ಹೋಗುವ ವಿಚಾರವನ್ನು ಬೇರೆ ಕಡೆಯಲ್ಲಿ ಒರೆದಿಯುತ್ತೇವೆ ಅಲ್ಲಿಯ ಪೋಲೀಸರು ಸ್ವಯಂಸೇವಕರ ಕೈಯೆಡ ಮುರಿದು ಉಪ್ಪು ಕಾಚಿಕೊಂಡರೆಪ್ಪೇ; ಅದೇ ಪ್ರಕಾರ ತಮ್ಮ ಕಣ್ಮುಲ್ಲಿಯ ಉಪ್ಪನ್ನು ಕಸಕೊಳ್ಳಿರೆಂದೂ ತಮಗೆ ಆ ರೀತಿಯಿಂದಲೂ ಕಾಯ್ದೆಭಂಗ ಮಾಡಿದ ಸಮಾಧಾನಿಯಾಗಲೆಂದೂ ಜಾಹೀರ ಮಾಡಿದ್ದಾರೆ ಯಾವ ಪೋಲೀಸನು ಮಹಾತ್ಮರ ಕೈ ಹಿಡಿಯುವಂಥ ಗಟ್ಟಿಗನಾಗುವನೆಂಬದನ್ನು ನೋಡುವ ಸಮಯ ಬಂದಿದೆ

ಗಿರವಾವು ಉಪ್ಪಿಗೆ ಏನೂರು ರೂಪಾಯಿ-

ಮಹಾತ್ಮರು ದಂಡಿಯಲ್ಲಿ ಮಾಡಿದ ಉಪ್ಪಿನ ಲಿಲಾವಾಯಿತು. ಅಹಮದಾಬಾದಿನ ಒಂದು ಗಿರಣಿಯ ಒಡೆಯನು ಇದನ್ನು ಏನೂರು ರೂಪಾಯಕ್ಕೆ ಕೊಂಡನು.

ಪದೇತಿ ಉಪ್ಪಿನ ಹಡಗ ಒಡೆಯಿತು-

ಏಸನದಿಂದ ೧೫೦೦ ಟನ್ನ ಭಾರವಾಗಿದ್ದ ಪರದೇತಿ ಉಪ್ಪಿನ ಹಡಗ ಗೋಗಂದೇಲವೆಂಬದು ಕಲಕತ್ತೆಯ ಹತ್ತರ ಭಾಗೀರಥಿ ಹೊಳೆಯಲ್ಲಿ ಕಲ್ಲ ಬಂಡೆಯಲ್ಲಿ ಸಿಕ್ಕು ಒಡೆಯಿತು. ಉಪ್ಪು ನೀರಾಗಿ ಹರಿದು ಹೋಗಿರಬಹುದು.

ಭಯಂಕರ ಶಿಕ್ಷೆ-

ದರಜಾರ ಗೋಪಾರದಾರಿಗೂ, ರಾಸವೆಂದರೆ- ಸರದಾರ ಪಟೇಲರು ಶಿಕ್ಷೆ ಹೊಂದಿದ ಗ್ರಾಮದ ಹಿರಿಯನಾದ ಬಾಲ ಭಾಯಿಗೂ ಅಧಿಕಾರಿಗಳು ಎಷ್ಟು ಸರ್ಪದ ಶಿಕ್ಷೆ ವಿಧಿಸಿದರು. ಸೆಡುತೀರಿಸಿಕೊಳ್ಳುವಂಥ ಇಂಥ ಭಯಂಕರ ಶಿಕ್ಷೆ ಕೊಡುವ ಬಂಗಾರವೇನೋ ದೇವರೇ ಬಲ್ಲ.

ಮಹತ್ವದ ಸುದ್ದಿಗಳು-

ಕೊಲ್ಹಾಪೂರು ಪೊದುಸಿಸು ಪಟ್ಟಿಗೆ ಗಿರಿಜನ ಸ್ವಯಂಸೇವಕರನ್ನು ಸಾಕಾರಿಗೆ ಕಳಿಸಿತು. ಇದರಲ್ಲಿ ಪಾಮುಂಡಿಂದ ಪೊಫೇಸರನ ತನಕ ಇರುಕತ್ತಾರೆ ಮತ್ತು ಕುಲವಿಚಾರದಿಂದ ಬ್ರಾಹ್ಮಣ, ಜೈನ, ಮರಾಠಾ, ಲಿಂಗಾಯಿತ, ಮುಸಲ್ಮಾನರಿದ್ದಾರೆ

ಇವರು ವೆಂದಲು ಪದೀ ಧರಿಸಬೇಕು. ಇದು ಸಿಗದ ಪಕ್ಷದಲ್ಲಿ ದೇತೀಗುಣಿಯು ಬಟ್ಟೆಯು ಅರಿವೆ ಕೊಳ್ಳಬೇಕು. ದೇಶೀ ಗಿರಣಿಯಾದರೂ, ಅದು ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿದ್ದರೆ- ಅದನ್ನು ಕೊಳ್ಳಬಾರದೆಂದು ಮಹಾತ್ಮರು ಅಭಿಪ್ರಾಯ ಪಟ್ಟಿರುತ್ತಾರೆ.

ಮದ್ರಾಸಿನ ಪರಿಷತ್ತೋತ್ಸವರಾಮರು ಕಾಂಗ್ರೆಸಿನ ಪಕ್ಷೀಯರಾದರೂ ಕೌನ್ಸಿಲ್ಕೆ ರಾಜೀನಾಮೆ ಕೊಡಲಿಲ್ಲ. ರಾಷ್ಟ್ರೀಯವಾರ ವ್ಯಾಪಿದ ದಿವಸ ಕೂಡಿದ ಪ್ರಚಂಡ ಸಭೆಯಲ್ಲಿ ಮಾತಾಡಲು ಪತ್ರವಿಸಿದರು. ಜನ

ಗಾಳಿಕ್ಕೆಗ್ಗೆಧಿತನವಾಗುವದು ಮತ್ತು ಆ ಗ್ರಾಮದ ಹಿರಿಯ ಜಗತ್ಪಸ್ಥಿವಾಗಿ ಬಂಗಾರದ ಅಸ್ಪಂದಿಂದ ರೈಯುವಂತಾಗುವದೆಂದು ಮಹಾತ್ಮರು ಹೇಳಿದ್ದಾರೆ

ಮಹಾತ್ಮರ ಎರಾಟ ಸ್ವರೂಪ ಧಾರಣ

ಮಹಾತ್ಮರು ೧೫ನೆಯ ಶತಕದ ಶರೀರವಿನ ತನಕ ಸುರತ ಜಿಲ್ಲೆಯಲ್ಲಿ ತಿರುಗಾಡಿ, ಕಾಯದೆಧರ್ಮ ಮಾಡುತಿದ್ದರು. ಅಲ್ಲಿಂದ ಮೇರೆಟವು ಪಸಂತೆ ಹಿಂದುಸ್ಥಾನದ ತುಂಬ ತಮಗೆಲ್ಲಿ ಸಂಚಾರ ಬೇಕಾಗುವದೆ ಅಂತ್ಯಕಟಿಯೋಟಾದೀತು? ಎಲ್ಲಿಗೆ ಹೋಗುವದು.

ಶೀಕ್ಷೆಯ ಕುರಿತು

(೧) ಶ್ರೀ ನರಿಮನ ಒಂದುತಿಂಗಳು (೨) ಶ್ರೀ ಜಮ್ಮುಸಾಲಾಲ ಒಬಾಜ ಎರಡು ವರ್ಷ. (೩) ಶ್ರೀ ರಾಮದಾಸ ಗಾಂಧಿ ಆರು ತಿಂಗಳು (೪) ಡಾಕ್ಟರ ಜಂಗಲಾಲ ದೇಸಾಯಿ ಎರಡು ವರ್ಷ. (೫) ಘುಲಜಂದಕಿಷಾ ಎಂಬ ವರ್ಷ (೬) ಇವರ ಹೊರತು ಅನೇಕರಿಗೆ ಶಿಕ್ಷೆಯಾಗಿರುತ್ತದೆ.

ನೋಟೀಸು

ಫಃ॥ ರಾ॥ ರಾ॥ ಬಸಪ್ಪಾ ತಂದಿ ವಿರಪ್ಪಾ ಕಿನ್ನಾಳ ಸಾ॥ ಹುಲ್ಲೂರ ತಾಲೂಕ ದೋಣಿ ಇವರಿಗೆ-

ನಾನು ಕೆಲಗೆ ನಹಿ ಮಾಡಿದವರು ಈ ನೋಟೀಸಿನ ಮೂಲಕ ನಿನಗೆ ತಿಳಿಸಿಪಡೆದೇನಂದರೆ-

ತಾರೀಖು ೧೫-೧೧-೧೯೩೦ನೇ ದಿವಸ ವಿಜಯ ವರ್ತಮಾನಪತ್ರದಲ್ಲಿ ನೀನು ಕೊಟ್ಟ ನೋಟೀಸಿನ ಮಜಕೂರು ಯಾವತ್ತೂ ಸುಳ್ಳು ತೊಹಮತಿನದು ಇಗುತ್ತದೆ ನಾನು ರಜಸ್ವಲೆಯಾದನಂತರ ನನ್ನ ಕೂಡ ನೀನು ಪ್ರೀತಿಯಿಂದಾ ಪ್ರಸಂಜ ಮಾಡಿಲ್ಲಾ ನಮ್ಮ ತಂದೆಗೂ ನಿನಗೂ ಗೃಹಕೃತ್ಯದ ವ್ಯವಹಾರದಲ್ಲಿ ವಾಂದೆ ಬಂದದ್ದು ನಿಜವಿದ್ದರೆ ನನ್ನ ನಿನ್ನ ಪ್ರೀತಿಗೆ ಕಲಂಕ ಬರಲಿಕ್ಕೆ ಕಾರಣವಿಲ್ಲ ನೀನು ಎರಡನೇ ಕೆಂಡತಿ ಮಾಡಿಕೊಳ್ಳಬೇಕಾದರೆ ನನ್ನಲ್ಲಿ ತಕರೀರಿಕ ಕೊರತೆ ವ ಮಾನಸಿಕ ಕೊರತೆ ಇಲ್ಲವೆ ಇಲ್ಲ ನಾನು ನಿನ್ನ ಆಧೀನಳಾಗಿ ನಡೆಯದಿದ್ದರೆ ನನ್ನ ಮೇಲೆ ನೀನು ಎರಡನೇ ವಿವಾಹ ಮಾಡಿಕೊಳ್ಳಿತಕ್ಕದ್ದು ಪ್ರಯುಕ್ತ ನನ್ನಲ್ಲಿ ಪ್ರಪಂಚದೊಳಗಿನ ಸಖ ಶಾಂತಿಗಳಿಗೆ ಶೋಂದರೆ ಕೊಡತಕ್ಕಂಥ ಗುಣ ದೋಷಗಳೇನೂ ಇಲ್ಲದಲೇ ನನ್ನನ್ನು ದೂಷಣ ಮಾಡಿ ಎರಡನೇ ಹೆಂಡತಿ ಮಾಡಿಕೊಂಡದ್ದು ಕೇವಲ ಅನ್ಯಾಯ ಅನೀತಿಪಂವಾದದ್ದು ಮತ್ತು ತಾ ೨೮-೧೦-೧೯೩೯ನೇ ದಿವಸ ನನ್ನನ್ನು ಕರಕೊಂಡು ಹೋಗುವ ಕುರಿತು ವಂದು ನೋಟೀಸು ಮಾಡಿದ್ದೆ ಆಗ್ಗೆ ನೀನು ಅದಕ್ಕೆ ಸಹಾ ಇನಕಾರ ಮಾಡಿ ಬಿಟ್ಟೆ ಅಂದಮೇಲೆ ನನ್ನ ನಿನ್ನ ಲಗ್ನದ ತ್ಯಾಗಪತ್ರಕ್ಕೆ ನೀನು ಸಮ್ಮತಿಸಿದಂತಾಯಿತು ಕದಾಚಿತ ನನ್ನ ಕೂಡ ನಿನಗೆ ಸ್ವಸಂಸಾರ ಮಾಡುವ ಅಶಯವಿದ್ದರೆ ನಾನು ಕೊಟ್ಟ ನೋಟೀಸಿನ ಪ್ರಕಾರ ಕರಕೊಂಡು ಹೋಗುತ್ತಿದ್ದಿ ಆಗದ ಕೋರ್ಟಿನಿಂದಾ ಬೇರೆ ನನ್ನ ಕಬ್ಜಾ ತಗೊಂಡಿದ್ದಿ ಎಂದಾವರ್ತಿ ನೋಟೀಸಿನ ವಿರುದ್ಧ ನಡೆಯುತ್ತಿದ್ದಿ ಅಂದಮೇಲೆ ನನ್ನ ಮೇಲಿನ ನಿನ್ನ ಗುಂಡೆಂಬ ಅಧಿಕಾರ ಉಳಿಲಿಲ್ಲಾ ಮತ್ತು ನನ್ನ ನಿನ್ನ ಲಗ್ನಸಮ್ಮತಿಯಿಂದ ಕೊನೆಗೊಂದ್ದು ವಿಮೋಡಸವಾಗಿಬಿಡದು ಅಂತಾ ಮನಸ್ಮೃತಿ ಆಧಾರ ಹಚ್ಚಿರುತ್ತಿದ್ದಿ ಸದರಿ ಆಧಾರ ಬ್ರಾಹ್ಮಣ ದ್ವಿಜಾತಿಯವರಿಗೆ ಸಮ್ಮಂಧಿಸಿದ್ದು ನಮ್ಮ ಕೂಡ್ರ ಜಾತಿಯ ಲಗ್ನದ ಲೌಕಿಕ ಹೇತುವಿನಿಂದಾ ನಾಡಪದ್ಧತಿಯಿಂದ ಮೇಲಿನ ಆಧಾರ ನನಗೆ ಜಾಯಮಾನವಾಗಲಾರದು ಮತ್ತು ನನ್ನ ಮೈಮೇಲೆ ಕಿವಿಸ್ಪನ ದಾಗೀನೆ ಇಟ್ಟಿರುತ್ತೇನೆಂದು ನಮ್ಮ ತಂದೆಯವರಿಂದಾ ಕಾಣಿಸ್ಪಿಟ್ಟ ಸುಳ್ಳು ತೊಹಮತಿನ ವಾತು ಇರತ್ತದೆ ಅಷ್ಟು ದಾಗೀನೆ ಇಡಲಿಕ್ಕೆ ನಿನ್ನ ಉತ್ಪನ್ನದ ಮೇಲಿಂದಾ ಖಾತ್ರಿಯಾಗಿಹುದು ಎಂದು ಬೇಕೆನೆ ನನ್ನ ಮೈಮೇಲೆ ದಾಗೀನೆ ಇಟ್ಟದ್ದು ನಿಜವಿದ್ದರೆ ಅವುಗಳನ್ನು ಸಾಬೀತ ಮಾಡಿಕೊಳ್ಳಬೇಗ್ಗೆ ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ನಿ ಏಲ್ ಕೋರ್ಟಿನಲ್ಲಿ ನಮ್ಮ ವಿರುದ್ಧ ಇಲಾಜ ನಡಸಿ ದಾಗೀನೆಗಳಿಟ್ಟದ್ದನ್ನು ಸಾಬೀತ ಮಾಡಿಕೊಳ್ಳಕ್ಕದ್ದು ಕದಾಚಿತ ಈ ನೋಟೀಸಿನ ವಿರುದ್ಧ ನಡೆದರೆ ವ ದಾಗೀನೆ ಇಟ್ಟದ್ದು ಸಾಬೀತ ಆಗದೆಯಿದ್ದರೆ ನಿನ್ನನ್ನು ಸುಳ್ಳು ತೊಹಮತ ಹಾಕಿದ ಅಪರಾಧಕ್ಕೊಳಪಡಿಸುವದ್ಕಾದೆ ಸುಳ್ಳು ತೊಹಮತ ಹಾಗ ದೇಲಾಸ್ತ್ರ ಮಾಡಿದ ಬಗ್ಗೆ ನಿನ್ನವೇಲೆ ರಿಪ್ರ ಸ್ಕಾರ ಇಲಾಜ ನಡಿಸುವದಕ್ಕೆ ಒಗ್ಗುತ್ತದೆ ತಿಳಿಯುವದು ಮತ್ತು ಈ ನೋಟೀಸಿನ ಖರ್ಚು ನಿನ್ನವೇಲೆ ಅದೆ

ಕಾ॥ ೧೦-೪-೧೯೩೦ ಇಸ್ವಿ

ಈ ಎಜಸ್ಟೆ ಪೆಚ್ಚಟ್ಟಿನ ಗುತಾ ಈರವ್ವಾ ಕೋಂ ಬಡವ್ವಾ ಕಿನ್ನಾಳ ಸಾ॥ ಮುದೇನಗುಡಿ ತಾಲೂಕ ರೋಣ ಇಕೇದು ಆದೆ

ಸ್ವಸಮಯ-

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ್] ಕೊಳ್ಳೇಗಾಲ ಇವರಿಗೆ ಬರೆದು ತಿಳಿಕೊಳ್ಳಿರಿ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಜಣವನ್ನು ವಿಸಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಜ್ಞ ಮತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಕ್ತೀ ಇಟ್ಟುಕೊಳುವ ಒಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು-



ಧಾರವಾಡ ಜಿಲ್ಲೆಯಲ್ಲಿ ಇಡೇಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರೈವಿಂಗ್ ವಿದ್ಯಾಲಯದಲ್ಲಿ ಜನರು ಈವರೆಗೆ ಪುಣೆ, ಬೆಳಗಾವಿಗೆ ಜೋಗಿ, ಬಂದಕ್ಕೆ ನಾಲ್ಕು ರೂಪಾಯಿ ಪೆಚ್ಚ ಮಾಡಿಕೊಂಡು ಬರುವವರಿದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರೈವಿಂಗ ಲೈಸೆನ್ಸ ಕೊಡುವ ವರ್ಗನನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳ ಸ್ಥಳೀಯ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿವನೆ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಎಪ್ರಿಲ ಆಖೈರ ತೊಳಗಾಗಿ ಹತ್ತು ಜನರನು ತಕೊಳ್ಳುವೆನು. ಆದರಿಂದ ಕೂಡಲೆ ಅರ್ಜೀಕನವಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಜ್ಞನು ಆನವಾ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

ಪ್ರೊ. ಪ್ಟಿ. ಎಸ. ಇಟಗಿ.

ಮುನಸಫಕೋರ್ಟನಹಕ್ಕರ, ಧಾರವಾಡ

ಈ ಪತ್ರವನ್ನು ಆಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ನಿಜಾಮ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

ನಿತ್ಯ ಪತ್ರ

ವಿಶ್ವವಾಣಿ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಪೂರ್ಣೇರಿ, ಬಿ.ಎ

ವರ್ಷ) ಧಾರವಾಡ ಶುಕ್ರವಾರ ತಾರೀಖು ೧೧ ನೇ ಏಪ್ರಿಲ ೧೯೩೫ (ಸಂಖ್ಯೆ ೬

ಅಂಕೋಲೆಯಲ್ಲಿ ಕರ್ನಾಟಕದ ಕಾಯದೆಭಂಗದ ಪ್ರಾರಂಭ

ತಾ॥೧೩ ಆದಿತ್ಯವಾರ ಸಾಯಂಕಾಲದ ನಾಲ್ಕು ಗಂಟೆಗೆ

ಮಂಗಳೂರಿನ ಶ್ರೀ. ಕಾರನಾಡ ಸದಾಶಿವರಾಯರು

ಕಾಯದೆಮುರಿಯುವರು

ಅಂದು ಅದೇ ಪೊತ್ತಿಗೆ ಊರೂರಿಗೆ ಸಭೆಮಾಡಿ, ಬೆಂಬಲವಿತ್ತು
ತನುಮನಧನದಿಂದ ಸಹಾಯಮಾಡಿರಿ

ನಾಮದಾರ ಬೆಳವಿಯವರ ದೇಶದ್ರೋಹ ಸ್ವಜನದ್ರೋಹ!!!

ನಾಮದಾರ ಬೇವಿಯವರು ಕರ್ನಾಟಕ ವಶ್ತು ಕನ್ನಡಿಗರ ಮೋರೆಗೆ ಮಸೀ ಹಚ್ಚುವಂಥ ನಾಚಿಕೆಯ ಕೃತ್ಯ ಮಾಡಿದರೆಂಬುದು ಅತ್ಯಂತ ದುಃಖದ ಮಾತ್ತು ಸಂತಾಪದ ಸಂಗತಿಯಾಯಿತು. ಶ್ರೀ. ನಾರಾಯಣರಾವ ಬೇವಿಯವರು ಇಂತ ಕೊಳಕು ಕುಂಠ್ಯ ಹೋದರು ಮಾಡಿದವನ ಇವರನ್ನು ಕಾಣಲಿಕ್ಕ ಹೋದ ಅಪೇಕ್ಷರ ಮುಂದೆ ಪ್ರಾಣ ಮುದ್ರೆಯಿಂದ ಆಗುಂದದಂದ ಇದ್ದೇನೆಂದು ಪರಾಭವ ಪಡಿಸಿ ಕೈಯ್ಯ ಮಾಡಿಕೊಟ್ಟರು. ಇವರ ಮನಸ್ಸಿಗೆ ಬಂದ ಹಾಗೆ ಮಾಡಲಿ ಇವರಿಗೆ ಫೋಗಿರಬಾರದೆಂದಿದ್ದರೆ ಎಷ್ಟೋ ಊಸಾಯಿಗಳನ್ನು ಜೇಲಾನ ಅಧಿಕಾರ ಯ್ಯಾಜಿಸ್ಟ್ರೇಟರ ಮುಂದಿಟ್ಟು, ವಸೆಯ ದಾರೀ ಹಿಡಿಯುತ್ತಿದ್ದರು. ಇವರ ಅಯಿಂದ ನಾಮದಾರ ಬೇವಿಯ ವಂಶಕ್ಕೆ ಸುಪಾಟನೆ ಮೂಡುತ್ತಿದ್ದರೂ, ಸರಿವಂಶಸ್ಥರಿಸಿಕೊಳ್ಳುವಷ್ಟಕ್ಕೆ ಗಳಿಯುಂಟು. ಇಂಥವರ ದೆಸೆಯಿಂದ "ಬಿಡಿಸು ಧೂಳ್ಕಾ" ಅಗಿ ನಾಮದಾರ ಬೇವಿಯವರು ದಂಡ ತುಂಬಿ ಅವರನ್ನು ಒಂಧವ ಕ್ತ ಮಾಡಿಸಿದರು. ಈ ಕೃತ್ಯವು ಅತ್ಯಂತ ಹಿಡಿಪಾಯಿತು. ನಾಮದಾರ ಬೆಳವಿಯವರು ತಾವೊಮ್ಮು ಪರಾಕ್ರಮ ಮಾಡಿದೆವೆಂದು ತಿಳಿದಿರಬಹುದು. ಅದರೆ ಅದು ಜನತೆಯ ದೃಷ್ಟಿಯಿಂದ ಸ್ವಜನದ್ರೋಹ ಮತ್ತು ದೇಶದ್ರೋಹದ ಕೂಡ ಫಿತೂರಿಯಾಯಿತು. ಮಹಾರಾಷ್ಟ್ರ ಪ್ರಾಂತದ್ದಾರ ಕರ್ನಾಟಕವೆಂದು ಕರ್ನಾಟಕಕ್ಕ ಕಟ್ಟಿದ್ದ ಬಿರುದು ಮುಗಿಸುವಂಥ ಪ್ರಸಂಗ ಬಂತು.

ಶ್ರೀ ನಾರಾಯಣರಾಯರು ಒಳ್ಳೇ ಉನ್ನತ ದಿಯಿಂದ ಕಾಯದೆಭಂಗದಲ್ಲಿ ಸೇರಿದ್ದಾರೆ ಸ್ವಯಂ ಸ್ಫೂರ್ತಿಯಿಂದ ಉಪ್ಪು ಕೊಂಡಿದ್ದಾರೆ. ಅದಕ್ಕಾಗಿ ಸರಕಾರದವರು ದಂಡ ಮಾಡಿದ್ದಾರೆ. ತಾವು ಕಾಯದೆಭಂಗದಲ್ಲಿ ಸೇರುವಾಗ ಮಾಡುವ ಪ್ರತಿಜ್ಞಾಭಂಗವಾಗಬಾರದು; ವೀರ ಪ್ರತಿಜ್ಞೆಯು ನಿಷ್ಫಲವಾಗಬಾರದು; ನಾಮದಾರ ಬೇವಿಯವರು ಕರ್ನಾಟಕದ ವೈರಿಗೆ ಹಚ್ಚಿದ ಡಾಂಬರದ ಕಲೆಯನ್ನು ಜೈಲರ ರಸಾಯನದಿಂದ ಅಳಿಸಿ ಹೋಗಬೇಕೆಂದು ಅವರ ಪ್ರೇಮಿಗಳು ಕಾಯದೆಭಂಗ ಮಾಡಿ, ತುರಂಗಾಕ್ಕೆ ಹೋಗಬೇಕು. ಅಂದರೇ ನಾವು ಮಾಡಿದ ಬೆಳವಿಯವರ ಅಧಿಕ ಪ್ರಸಂಗತನಕ್ಕೆ ಬಿಹಾರ ತಿದಂತಾಗುತ್ತದೆ.

ಇವರ ಸಂಗಡ ಶ್ರೀ. ಗಂಗಾಧರರಾವ, ಶ್ರೀ. ಹಳಗಿ ಮತ್ತು ಶ್ರೀ. ದಾಬಡೆಯವರಿದ್ದಾರೆಷ್ಟೇ; ಉಳಿದ ಮೂವರು ಬಿಟು. ಇವರಿಂದ ವಶಿ. ಗೇ ದಂಡ ತುಂಬಬೇಕಾದರೆ—ನಾಮದಾರರ ಹೊಟ್ಟೆಯಲ್ಲಿ ಬೇರೊಂದು ಹೇಳುವಿರಬೇಕೆಂದು ಧ್ವನಿತವಾಗುತ್ತದೆ ಅದು ಸ್ವಂತ ಮತ್ತು ಸ್ವಾರ್ಥದ್ದಾಗಬಹುದು. ರಾಷ್ಟ್ರೀಯವಾಗಿಲ್ಲವೆಂದು. ರಾಷ್ಟ್ರ ಸ್ವತಂತ್ರವಾಗಬೇಕೆಂದು ಪರಸಾ ಇಚ್ಛಿಸಿದವರು ಅಂತ ಸ್ವಾರ್ಥಿಗಳನ್ನಿಗುವಂಥ ಮಾಡಿದ ಕೃತ್ಯವು ಪರಾಕಾಷ್ಠೆಯ ದಾಯಿತೆಂದು ಎಸ್ಟು ಸಾರಿ ಬರೆದರೂ ತೀರದು. ಇನ್ನೊಂದು ಅಶ್ಚರ್ಯ ಅಪರಾಧವೇ ಸರಿ ಇಂಥ ಕೆಲಸ ಈ ಸಂತರವಾಗದಂತೆ ಕನ್ನಡಿಗರು ಎಚ್ಚರಾಗಬೇಕಾಗಿದ್ದು.

ಜೆಳ್ಳು ೨೦೦೦ ರಾ. ಬಿ. ಅಂಗಡಿಯವರಿಗೆ ಕರಂಬಿನಳಿಗೆ ಗದಗ ವಿರುದ್ಧ ಬಂದ ಉಚ್ಚಾಟನೆ.

ಕಾಯದೆಭಂಗದ ಪರ್ವಾದ್ದಲ್ಲಿ ಅವನ ಸಭೆ ಸ್ಥಾಪಿಸಲು ಪ್ರವೃತ್ತಿಕಾರಾದ ಬೆಳಗಾವಿಯ ರಾ. ಬಿ. ಅಂಗಡಿಯವರು ಈ ಬಗ್ಗೆ ತಮ್ಮ ಮತವನ್ನು ಮುಂದೆ ಕೊಟ್ಟಂತೆ ಬಾಹೀರ ಮಾಡಿದ್ದಾರೆ.

"ತಾಗಿದ ಜಳವಳಿಯು ದೇಶಕ್ಕೆ ಹಿತಾಕಾರಿಯೆಂದು ನಾನು ತಿಳಿಯುವವನಿಲ್ಲ. ಯೋಗ್ಯವಾದ ಕಾರಣಕ್ಕಂತ ಜಾರ ಮನೋಭಾವನೆಯಲ್ಲಿ ಪ್ರೇರಣೆಯಾಗಿಲ್ಲವೆಂಟ ವಸಾಯಂದೆ ಈ ಜಳವಳಿಯಾಗಿದೆ ಅಂತಕಾರಣಕ್ಕೆ ಅಲಿಕೆಮಾಡಿಮಥ ವಿಷಯವಾಗಿದ್ದರಿಂದ, ಇದು ಒಸತೆಯಲ್ಲಿ ಬಹು ಬೇಗನೆ ಪಬ್ಬುಗೊಳ್ಳುವದು. ಹಿಂದುಸ್ಥಾನದಲ್ಲಿ ಅಸಂಖ್ಯ ಮತಭೇದಗಳಿದ್ದು, ಇವು ಯಾವದೊಂದು ಚಳವಳಿಗೆ ಏಳ್ಗೆಯನ್ನುಂಟ ಮಾಡುವವು ಇದೇ ಹಿಂದುಸ್ಥಾನದಲ್ಲಿ ರಾಜಕೀಯ ವಿಷಯವಾಗಿಯಾದರೂ ಕನಿಸ್ಟ ಪಕ್ಷಕ್ಕೆ ಹಿಂದುಸ್ಥಾನದ ಒಂದೇ ಮತವಾದ ಪೂರ್ತಸ್ವರಾಜ್ಯ ದೊರೆಯುವಲಾಂದು. ಈ ಚಳವಳಿಯು ಹಳ್ಳಿಗಳಲ್ಲಿ ಹಬ್ಬುವದೇ ನಾನು ಇದನ್ನು ವಿರೋಧಿಸುವೆನು."

ಭಾವು! ರಾ. ಬ. ಅಂಗಡಿಯವರೇ ಭಾವು!! ಈ ಪ್ರಸಂಗದಲ್ಲಿ ನೀವು ಆರಂಭದಲ್ಲಿ ಅವಿಧೇಯರಾಗಿ ಮುಂದೆ ಬಂದುದಕ್ಕಾಗಿ ನಿಮ್ಮ ಅಭಿನಂದನವನ್ನು ಎಷ್ಟು ಮಾಡಿದರೆ ತೀರಲಾರದು! ನೀವು ಅಡಿದಂತೆ ನಡೆಯುವದು ಮಾತ್ರ ಕಠಿಣವಾಗುವದು. ಹಳ್ಳಿಗಳಲ್ಲಿ ಮಹಾತ್ಮರನ್ನು ಹಿಡಿಯಲಿಲ್ಲ ಒಂಟಿಗಾಲಿನ ಮೇಲೆ ನಿಲ್ಲುವಿದ್ದು, ಅವು ನಿಮ್ಮಂಥ ಮಹಾತ್ಮರು ತಳವಾರಿಕೆ. ನೀವು ಹಳ್ಳಿಗೆ ಹೋಗುವ ಪೂರ್ವದಲ್ಲಿ ಒಂದೆರಡು ಹಳ್ಳಿಯಲ್ಲಿ ಹತ್ತಕ್ಕಿಂತ ಹೆಚ್ಚು ಜನರು ಸ್ವಯಂಸೇವಕರಾಗಿಬರ್ತಾರೆಂದನ್ನು ಧ್ಯಾನದಲ್ಲಿಡಿರಿ. ಹೆಚ್ಚರ ಕೂಡ ಹಳ್ಳಿಳ್ಳಿಯವರು ಮಾನ ಹಳ್ಳಿಯಲ್ಲಿ ಹೋಗುವೆಂಬುದನ್ನು ಧ್ಯಾನದಲ್ಲಿಡಿರಿ.

ಹತ್ತು ವರ್ಷಗಳ ಹಿಂದೆ ಲಿಂಗಾಯತರು ಅಸಹಕಾರದ ಚಳವಳಿಯಲ್ಲಿ ಸರಕಾರಕ್ಕೆ ಸಹಾಯ ಮಾಡಿದರು. ಅದು ಸ್ವಜನ ದ್ರೋಹ ಮಾಡುವಂಥ ದ್ರೋಹಕ್ಕೆ ಕಾರಣವು ಏಪ್ರಿಲ್ ಈ ಅಲ್ಪಸಮಯದಲ್ಲಿ ತಿಲಕರು ಸರ್ವಪಕ್ಷಿಯ ಬಿಡಿಸಿ ಆಂದೋಲನದ ಉದ್ದರಿಂದಲೇ ಲಿಂಗಾಯತರು ಈಗಿನ ಚಳವಳಿಯಲ್ಲಿ ಸೇರಿಕೊಳ್ಳದ್ದಾರೆ. ನಿಮ್ಮ ಕಾಲುವಿಸಿಯ ಟೀಟುಯೆನ್ನು, ಬೋಳಮುಕ್ಕ ಒಬ್ಬರಾಜ ಪರುಣ ಕರ್ನಾಟಕ ವಿಭಾಗಿಸುವುಲ್ಲ, ದೇಶಂಧ್ರ, ಸ್ವಜನದ್ರೋಹ ಇಮಾಮ ಒಮ್ಮಿಲಾನ ಮಾಡುವ ಮೊದಲನ್ನು ಸ್ವಜನದ್ರೋಹದ ಕಣ್ಣಿನಿಂದ ನೋಡಿರಿ. ಇಲ್ಲೂ ಒಂದು ಸಲ್ಲ ಅಲಗುರುಳಿದ ವೀರ. ಈತನ ಧೀರ ಪ್ರತಾಪವನ್ನು

"ಹಿಂದಿನ ಅಡೋಸಿನಲ್ಲಿ ನಮ್ಮ ಪರವು ಹಿಂಡಿಳು ಮಾಡುವ ಪ್ರಯತ್ನವನ್ನು ಸ್ತ್ರೀಕರಿಸುವದಕ್ಕಾಗಿ ನಮ್ಮ ಶರೀರವನ್ನು ಒಲಿವ ಅವಕಾಶವನ್ನು ಕೊಡುವದೇ ಯೋಗ್ಯವೆಂದು ತಿಳಿದು ನಾವಿಗಳು ಅಕ್ಕಿರಕಿಕ ಗೃಹ ಪ್ರವೇಶ ಮಾಡಿದೆವು."

ನೀಲಿಬೆಳ್ಳಿ ಒಸಕಾ ಪಸ್ಟೇ ಲೆಟ್ಟರಿನಲ್ಲಿ ಮಾಡಿರುವ ಜೈಲಿನ್ನು ನೋಡಿರಿ ಯಾರೋಪಿ ಸ್ವಾಂಗದ ಬಾಲ್ಯ ಬಾಲ (ಸೈಕ್) ಎಬಿಡೆಂಬಂಥ (ಜೂಲಿ) ಕೈ ಬರಹದ ಅಪ್ಪಣೆಯ ಒಳ್ಳೆ ಬಾಯ್ಕಾಗದ ಪ್ರಸಾಗರಿ ಕೆಳಗಿನ ಗುರ್ತಿಟ್ಟಿನು ಸಾಮಾನ್ಯ ಕುಲು ಹುಟ್ಟಿಗೆ ವಿಸಾಕ ಪೂಸ್ಯವಾಗಿರ್ತ್ತದೆಂದು. ತಿಳಿದಿರಿ. ನಿಮ್ಮ ಧರ್ಮದಲ್ಲಿ ಗುರುವೇ ಉಚ್ಚಾಟ ಸಾಮಾನ್ಯವಾದ ಸಾಕ್ಷಿದ್ದವನು ಬಗ್ಗೆ ಕಾಲಿಗಿಂತ ಜಂಗಮರೇ ಪವಿತ್ರ ಬಾದು ಪೈಕಿ ಕೊಟ್ಟರೂ, ಜಂಗಮರು ಗುರುವಿನ ದರವು ಕಾಲಿಕ್ಕಿರೆಂದನ್ನೆ ಎರಿಯು ಬೆಡಿರಿ. ರಾ.ಬ ರಿದ್ದೇ ಮೆ ಕಾಯುದೆಭಂಗಕ್ಕೆ ಕ್ಷಿಗೆಗನ್ನೋಪಿದೆಲ್ಲೆಂಬ ಮೆ ಪೈಕ್ಕೆ ಪಡಬೇಡಿರಿ. ನಿಮಗಿಂತ ಅಪಾಲವ ಅನಿಂದ ಶ್ರೀಪ್ರಕಾಶ, ಜಗತ್ಪ್ರಸಿದ್ಧ ಮಹಾತ್ಮಗಿಯಂತ ವಕೀಲ ಪ್ರಾಣವನ್ನು ಪಾರಿಟ್ಟು, ಸೊಸೈನ ಮೇಲೆ ಮಣ್ಣು ತೂರಿ, ನಿಮ್ಮ ಕಣ್ಣಿಲ್ಲಿಗೇ ಮಣ್ಣು ಹಾಕಿಕೊಂಡು ಕನ್ನಾ ಕಿಕ್ಕಿಕೊಂಡಿಲ್ಲವೆ ಧ ಅಮಾಯಕತ್ವವನ್ನ ನಿಮ್ಮ ಬೇಕಾಬಿಟ್ಟಿಯ ಮುಂದೆ ಮಾಡಿಸಿಕೊಳ್ಳಬೇಡಿರಿ. ಹಾಗೆ ಮಾಡಿದ್ದಾದರೆ—ಕಪ್ಪೆಯು ಎತ್ತಿಗೆಲು ನೈ ಉಬ್ಬಿಸಿದಂತಾಗುವದು.

WANTED

VACANCY

Clerical Department.

" Intelligent men of good physique, not over 25 years of age. Applicants must apply in own handwriting which must be neat, to the Agent Imperial Bank of India,

ಹುಲಿಯು ಕಾಯದೆಭಂಗ ಮಾಡಿ,

ಕುರಂಗ ಕಂಡಿತು.

—:*:—

ತ್ಯಾವಣಕೇರಿಯ ರಾಷ್ಟ್ರಧಾನಿಯಾದ ಶ್ರೀನಿವಾಸಪ್ಪನಿಗೆ ನೀಲಿಯ ಸರಕಾರು ಹೊಗೆಗಿರುತ್ತದೆ. ಇದಕ್ಕೆ ಸೆಪ್ಟೆಂಬರಿನಲ್ಲಿ ಒಂದು ಹೆಬ್ಬುಲಿಯು ಪಂಜರದೊಳಗಿಂದ ಹೊರಬಿದ್ದು, ಊರಿನವರಿಗೆ ಒಂದು ಪೆಲಿಯು ಕೊಟ್ಟಿರ ಪ್ರಾಣವು. ಆಡವಿಯ ಅರಸು ಹಿಂಸೆಯೇ ಅದರ ಧರ್ಮವು ಆದರೆ ಅಹಿಂಸೆಯು ಯುಗವರ್ತ್ತಿಯಾದ ಒಬ್ಬರಿಗೂ ತಡೆಯಲಿಲ್ಲ. ಊರಿನಿಂದ ಸೀಮೆಯ ಮಾಡಲಿಲ್ಲ ಹಲ್ಲಿನಿಂದ ರಕ್ತ ಮಾಂಸ ತೆಗೆದುಬಿಟ್ಟಿತು. ಸಾಹಸಿಗರೂ ಜನರೂ ಹಿಡಿಯಲು ಬಂದರು. ಆದರೆ ಅಹಿಂಸಕಾರದ ತತ್ವದ ಪ್ರಕಾರ ಪೊಲೀಸ ಸ್ಟೇಶನ್ನಿಗೆ ಹೋಗಿ, ಇನ್ಸಪೆಕ್ಟರರ ಸ್ವಾಧೀನಮಾಯಿತು. ಇನ್ಸಪೇಕ್ಟರರು ಇದರ ಜವಾಬ್ದಾರಿಕೆಯನ್ನು ತೆಗೆದುಕೊಳ್ಳಲಿಲ್ಲ. ಫಿರ್ಯಾದಿ ಕೊಡಲಿಲ್ಲ. ಇದನ್ನು ಸರಕಾರಿನವರ ವಶ ಮಾಡಿದರು. ಅವರು ಇದನ್ನು ಪಿಂಜರದಲ್ಲಿ ಪಂಜರದಲ್ಲಿ ಹಾಕಿದರು. ಹಿಂದು ಸ್ಥಾನವೆಂಬದೂ ದೊಡ್ಡ ಪಂಜರವಾಗಿದೆ. ಸರಕಾರಿನವರಿಗೆ ಪೆಟ್ಟಾದವರಿಗೆ ಪಂಚೇರಿಕ್ಕೆ ಹೋಗಲು ವಾರಂಟ್ ಕೊಡುವದಿಲ್ಲ. ಅದೇ ಪ್ರಕಾರ ಈ ವನರಾಜನಿಗೆ ಕನ್ನ ಬಗ್ಗಿಸಿದ್ದಕ್ಕಾಗಿ ವನಕ್ಕೆ ಹೋಗಲು ಸರಕಾರದ ಬೈಲರಿಂದ ಪೋಲೀಸರು ಇದಕ್ಕೆ ಅನಿರ್ಬಂಧ ದಾರಿ ಕೊಡಲಿಲ್ಲ !!!

———

ನದಿಪೂರದಲ್ಲಿ ಹರತಾಳ.

—)(೦)(೦)(—

ಮುನಲವಾನರೂ ಹರತಾಳದಲ್ಲಿ ಸೇರಿದರು.

—()—(೦)—()—

ಸರಕಾರದವರು ದರಬಾರ ಗೋಪಾಲದಾಸ ವೈಶ್ಯ ರಾಜಭಕ್ತಾಯಿ ಸೋನಿತ್ರಾ ಇವರಿಗೆ ಪಿಲಕೋಡಿನಗರಿಸೆಯು ಕಲವಿನ ಪ್ರಕಾರ ಎರಡು ವರ್ಷದ ಕಠಿಣ ಶಿಕ್ಷೆ ವಿಧಿಂದರು. ಹತ್ತಕ್ಕಿಂತ ಹಚ್ಚಿ ಜನರಿಗೆ ಕಾಯದೆಭಂಗ ಮಾಡಲಕ್ಕೆ ಉತ್ತೇಜನ ಕೊಡುವದಕ್ಕಾಗಿ ಮೂರು ವರ್ಷ ಕೈದು ಮತ್ತು ಇನ್ನೂರು ರೂಪಾಯಿ ದಂಡವಾಗಿಡಬೇಕೆಂದು ಈ ಕಲವಿನಲ್ಲಿ ಹೇಳಿದ್ದು ಈ ಕಲವಿನ ಪೂರ್ಣ ಉಪಯೋಗವನ್ನು ಬೋರಸಾದದ ಫರ್ಸ್ಟಕ್ಲಾಸ ಮ್ಯಾಜಿಸ್ಟ್ರೇಟರು ಮಾಡಿರುವಂಥದು. ಈ ಉಗ್ರ ಶಿಕ್ಷೆಯ ದನಮಿಂದ ನಡಿಯಾಡದವರು ಹರತಾಳ ಮಾಡಿ, ಎಲ್ಲ ವ್ಯವಹಾರ ಬಂದಿಟ್ಟಿದ್ದಾರೆ. ಹರತಾಳದಲ್ಲಿ ಮುಸಲಮಾನರೂ ಸೇರಿದ್ದಾರೆ.

ಸತ್ಯಾಗ್ರಹಿಗಳು

ಕೋರ್ಟನಲ್ಲಿ ಹೇಗೆ ವರ್ತಿಸಬೇಕು?

(ಸತ್ಯಾಗ್ರಹ ಪ್ರಶ್ನೆ ವಿಭಾಗದಿಂದ)

೧ ಕಾಯದೇಭಂಗದ ಕಾರ್ಯಕ್ರಮದಂತೆ ಉಪ್ಪಿನಕಟ್ಟಳೆಯನ್ನು ಮುರಿದನಂತರ ಸ್ವಯಂಸೇವಕರನ್ನು ಪೋಲೀಸರು ಹಿಡಿದುಕೊಂಡು ಹೋಗುವರು. ಆ ನಂತರ ಅವರನ್ನು ಮ್ಯಾಜಿಸ್ಟ್ರೇಟರಿನವರಿಗೆ ಒಯ್ಯುವರು. ಆಗ ಸ್ವಯಂಸೇವಕರು ಹೇಗೆ ನಡಕೊಳ್ಳಬೇಕು?

೨ ನಿಮ್ಮ ಹೆಸರು ಏನು? ಎಂದು ಕೇಳುವರು. ಉತ್ತರವನ್ನು ಕೊಡಬಾರದು. ಕೋರ್ಟಿಗೆ ಶಾಂತ ರೀತಿಯಿಂದ "ನನಗೆ ಈ ವಿಚಾರಣೆಯಲ್ಲಿ ಯಾವುದನ್ನೂ ಮಾಡಬೇಕಾಗಿಲ್ಲ" ಎಂದು ಹೇಳಬೇಕು. ಕೋರ್ಟನಲ್ಲಿ ಯಾವದೇ ತರದ ಸೊಕ್ಕಿನ ವರ್ತನೆಯನ್ನು ಸತ್ಯಾಗ್ರಹಿಗಳು ತೋರಿಸಬಾರದು. ಶಾಂತ ರೀತಿಯಿಂದಲೂ ಗಂಭೀರತೆಯಿಂದಲೂ ನಡಕೊಳ್ಳಬೇಕು.

ಈ ನಿಯಮಗಳನ್ನು ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ. ಜವಾಹರಲಾಲ ನೆಹರುರವರು ನಿಯೋಜಿಸಿದ್ದಾರೆ.

ಚಿಮ್ಮಡದ ಅಂಗಡಿ ಅಂಬೇ ಸತ್ಯಾಗ್ರಹ.

—(೦)—

ಸುರತಾನ ಹತ್ತಿರಿನ ಚಿಮ್ಮಡದಲ್ಲಿಯೇ ಶ್ರೀ ರಂಗದಾಸ ಗುಂಡಿಸುನ ಸ್ನ ಪೋಲೀಸರು ಹಿಡಿದು ಕೂಡಲೆ, ಇವನ ತಮ್ಮಂದಿರಾದ ಮಂಜಪ್ಪ ಆಳಿಗೆ ಬಂದು ಸ್ವಯಂಸೇವಕರನ್ನು ತಯಾರಿಗಿದ್ದಾರೆ ಇವರು ಮೊದಲಾಗಿ ಒಬ್ಬರು ಉಪ್ಪು ಮಾಡಿದರು. ತಮ್ಮಲ್ಲಿ ಎರಡು ಗುಂಪು ಮಾಡಿದರು. ಒಂದು ಗುಂಪಿನವರು ಉಪ್ಪು ಮಾಡುವ ಕೆಲಸದ್ದು. ಎರಡನೆಯವರು ಅದನ್ನು ಬೇರೆಬೇರೆಯಾಗಿ ಪೊಟ್ಟಣ ಮಾಡುತ್ತಿದ್ದರು. ಮತ್ತು ಪ್ರತಿಯೊಂದು ಮನೆಯಲ್ಲಿಯೂ ಸಂಗ್ರಹ ಮಾಡುತ್ತಿದ್ದರು. ಮುಂದೆ ಅನುಕೂಲವು ಪ್ರಕಾರ ಮಾಡುತ್ತಿದ್ದೇವೆಂದು ತೊತ್ತಾಗಿದೆ.

———

ಶಿಕ್ಷೆ

ಶ್ರೀ. ಗಂಗಾಧರರಾಯರಿಗೆ ಒಂದು ತಿಂಗಳು ಸಾದಾ ಕೈದು ಇಲ್ಲವೆ ನೂರು ರೂಪಾಯಿ ದಂಡ

೧ ಶ್ರೀ ನಾರಾಯಣರಾವ ಜೋಶಿ ವಕೀಲ

೨ ಶ್ರೀ ಅನಂತರಾವಿಕೆ ದಾಬಡೆ

೩ ಶ್ರೀ ವೇದಮೂರ್ತಿ ಯಾಳಗಿ

ಇವರಿಗೆ ತಲಾ ರೂಪಾಯಿ ದಂಡ ಇಲ್ಲವೆ ೧೫ ದಿವಸ ಸಾದಾ ಶಿಕ್ಷೆ

ನಾಲ್ವರೂ ದಂಡ ಕೊಡದೆ ತುರಂಗಕ್ಕೆ ಹೋದರು

ಪ್ರಯಾಣಿಕನು ಗುಂಡು ಹಾಕಿ

ಇಬ್ಬರು ಪೋಲೀಸರನ್ನು ಇಬ್ಬರು ಪ್ರಯಾಣಿಕರನ್ನು ಕೊಂದನು.

—(೨)—

ಜಬಲಪುರದ ಹತ್ತಿರನುವ ಬೈಹಾರ ಸ್ಟೇಶನದಲ್ಲಿ ರಾತ್ರಿ ರಾಜಧಿಕಿಂಗ್ ಕಾವಲಗಾರರಾಗಿದ್ದ ಇಬ್ಬರು ಸಿಪಾಯಿಗಳನ್ನು ಇಬ್ಬರು ಪ್ರಯಾಣಿಕರನ್ನು ಗುಂಡುಹಾಕಿ ಕೊಂದನು. ಕಾರಣ ತಿಳಿದುಬಿಲ್ಲ.

———

ಸತ್ಯಾಗ್ರಹಿಗಳಿಗೆ ಪೊಲೀಸ್ಸರ ಉಪದೇಶ

ಕೈ ಒಡ್ಡಿದ ಮುದು ರಕ್ತ ಬರುವಂತೆ ಹಿಡಿದ ಉಪ್ಪು ಬಿಡಬೇಡಿರಿ

ನೀವು ಕಾಯದೆಭಂಗ ಮಾಡಿ, ಉಪ್ಪು ತೆಕ್ಕೊಂಡು ಹೋಗುವಾಗ ಪೊಲೀಸರು ಬೇಡವೆಂದು ಕೂಡಲೆ ಕೊಡುವರು. ಆವಾಗ ನಿಮ್ಮ ಕೈ ಒಡ್ಡಿದ ಮುದಿದು, ರಕ್ತ ಬರುವಂತೆ ಹಿಡಿದ ಉಪ್ಪನು ಬಾಡಬೇಡಿರಿ.

———

ಪೆಂಗನವನ್ನು ಹಿಡಿದರೆ ಚಿತ್ತಿನೆಕಾಯಿ ಉಪಹಾರ್ಸ

ಪೋಲಿಸರು ಕಾಯದೆಭಂಗದಲ್ಲಿ ಸೇರಿದ ಜನರನ್ನು ಕೈ ಕೈ ಮುಟ್ಟಿ ಅರು ಕಯ್ಯಲ್ಲಿ ಉಪ್ಪು ಕಾಣಿಸಿಕೊಂಡರೆ ಜಗತಿನ ತಂಪು ಇವರ

ಹತ್ತು ವರ್ಷದ ಹುಡುಗರು
ಕಾಶುದೆಭಂಗ ಸಾವಿರಾರು ಮಾಡಿದರು.

ಮುಂಬಯಿಯಲ್ಲಿ ಏದರಿಂದ ಹತ್ತು ವರ್ಷ ದೊಳಗಿನ ಹುಡುಗರು ಸಾವಿರ ಸಂಖ್ಯೆಯಿಂದ ಮೆರವಣಿಗೆಯಿಂದ ಸಮುದ್ರದ ದಂಡೆಗೆ ಹೋಗಿ, ನೀರು ತಂದು ಮನೆಯಲ್ಲಿ ಉಪ್ಪು ಮಾಡಲು- ತಾಯಿ ತಂದೆಗಳಿಗೆ ಕೊಟ್ಟವು !!

ಅಕ್ಕೀಆಲೂರಿನಲ್ಲಿ
ರಾ. ಬ. ಕಂಬಳಿಯವರಿಗೆ ಬಹುಮಾನ.

ಹಾನಗಲ್ಲ ತಾಲೂಕ ಆಲೂರ ಗ್ರಾಮದಲ್ಲಿ ರಾಷ್ಟ್ರೀಯ ವಾರದ ಮೊದಲನೇ ದಿನವಾದ ೬ನೇ ಎಪ್ರಿಲ ದಿವಸ ಸಂಧ್ಯವಿಸಿದ ವಿಚಿತ್ರ ನೋಟವು.

ಮಹನೀಯರೇ— ೬ನೇ ಎಪ್ರಿಲಿನ ದಿವಸ ಆಲೂರಲ್ಲಿ ಮುಂಬಯಿ ಲೆಜಿಸ್ಲೇಟಿವ್ವ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರಾದಂಥ, ಧಾರವಾಡ ಜಿಲ್ಲಾ ಲೋಕಲಬೋರ್ಡಿನ ಪ್ರೆಸಿಡೆಂಟರಾದಂಥ, ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದಂಥ ರಾವಬಹಾದ್ದೂರ ಕಂಬಳಿಸಾಹೇಬರ ಮೆರವಣಿಗೆಯ ಮಹೋತ್ಸವವು ನೆಂವೇರಿತು.

ರಾವಬಹಾದ್ದೂರವರ ಅನುಯಾಯಿಗಳು ೬ನೇ ತಾರೀಖಿನ ದಿನವೇ ಮೆರವಣಿಗೆಯಾಗಲಿಕ್ಕೇ ಬೇಕೆಂದೇ ರಾವಬಹಾದ್ದೂರವರಿಗೆ ಆಮಂತ್ರಣ ಕೊಟ್ಟಿದ್ದರಿಂದ ಸನ್ಮಾನಾರ್ಥವಾಗಿ ಜಾಲನವಾಲಾಬಾಗದ ಕೊಲೆಯಾದ ದಿವಸ ಮತ್ತು ರಾಷ್ಟ್ರೀಯ ಖಂಡನ ಒಂದು ವಾರದವರೆಗೆ ಪಾಲಿಸತಕ್ಕ ರಾಷ್ಟ್ರಕಾರ್ಯಕ್ಕಾಗಿ ನೇಮಿಸಿದ ವಾರದ ಮೊದಲನೇ ದಿನವಾದರೂ, ಮಹಾತ್ಮಾಜಿಯವರು ಉಪ್ಪಿನ ಕಾಯಿದೆ ಮುರಿಯಲಿಕ್ಕೆಂದು ನೇಮಿಸಿದ ದಿವಸವಾದರೂ, ಮತ್ತು ಆವತ್ತೇ ಎಷ್ಟೆಷ್ಟೋ ರಾಷ್ಟ್ರ ಬಕ್ಕರ ಒಂಥಸವಾಗುವದೋ, ಎಲ್ಲೆಲ್ಲಿ ಏನೇನು ಅನರ್ಥವಾಗುವದೋ ಎಂದು ಇಡೀ ಹಿಂದುಸ್ಥಾದೊಳಗಿನ ಜನರು ಹುಬ್ಬುಗೈ ಇಕ್ಕಿ ಒಳ್ಳೇ ಚಿಂತಾಕ್ರಾಂತರಾಗಿದ್ದ ದಿನವಾದರೂ ಸಹ ನವ್ಯ ರಾವಬಹಾದ್ದೂರವರು ನೋಟಾರ ಲಾರಿನಲ್ಲಿ ಕುಳಿತು, ಕೊರಳಲ್ಲಿ ಮಾಲೆಗಳನ್ನು ಧರಿಸಿ ಒಳ್ಳೇ ವಿಜ್ರಂಭಣೆಯಿಂದ ಬೆರೆದರು. ಅವತ್ತಿನ ದಿನವು ಲೋಕದೃಷ್ಟಿಯಿಂದ ಎನ್ನು ಅನಿಷ್ಟಕಾರಕವಾದರೂ ಅವತ್ತೇ ಮೆರವಣಿಗೆಯನ್ನು ಮಾಡಿಸಿಕೊಂಡು ತಮ್ಮ ಭಕ್ತಜನರು ವ್ಯಕ್ತಪಡಿಸಿದ ಉತ್ಸಾಹವನ್ನು ಕಡಿಮೆ ಮಾಡದಿದ್ದದ್ದು ರಾವಬಹಾದ್ದೂರವರಿಗೆ ಭಕ್ತಜನರು ಮೇಲಿಂತಕ್ಕ ಪ್ರೀತಿಯನ್ನು ವ್ಯಕ್ತಪಡಿಸುವದರ ಜತೆ ಕೂಡ ಸ್ವದೇಶ ಪ್ರೇಮವನ್ನೂ ವ್ಯಕ್ತಪಡಿಸುತ್ತದೆ.

ಒರ್ವ ಪ್ರೇಕ್ಷಕ.

WANTED

VACANCY
Clerical Department.

" Intelligent men of good physique, not over 25 years of age. Applicants must apply in own handwriting which must be neat, to the Agent Imperial Bank of India, Hubli.

ನೋಟೀಸು

ಚನ್ನಬಸ್ಸಿ ಕೋಮು ಚನ್ನಬಸ್ಸಪ್ಪಾ ಸಾಂಕಿ ಸಾಕೀನ ಹಕ್ಕಿಮಕ್ಕೂರ ಹಾಲಿವಸ್ತಿ ಕಲಿವಾಳ ಈ ಕಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಚನ್ನಬಸ್ಸಪ್ಪಾ ತಂದಿ ಬಸಪ್ಪಾ ಸಾಂಕಿ ಅತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಹೆಂಡತಿಯಾಗಬೇಕು ನೀನು ನನ್ನ ಮನೀ ಬಿಟ್ಟು ಹೋಗಿ ನಾಲ್ಕು ವರ್ಷವಾಯಿತು ಎಷ್ಟು ಸಾರೆ ಕರೆಸಿದರೂ ಬರಲಿಲ್ಲ ನನ್ನ ಮೈಯ್ಯಲ್ಲಿ ಒಂದು ಕರದ ಬೇನೆ ಶೇರಾ, ನನಗೆ ಯಾರೂ ಮಾಡತಕ್ಕವರು ಗತಿಯಿಲ್ಲದಾದ್ದರಿಂದ ಚನ್ನಬಸಪ್ಪಾ ಜನಳ ತಂದಿ ಪರಪ್ಪಾ ಮುಗದೂ ದನೆಂಬವನನ್ನು ದತ್ತಕ ಮಾಡಿಕೊಂಡಿದ್ದೇನೆ ಈ ಮಾತಿಗೆ ಮೂರು ವರ್ಷದ ಮೇಲಾಯಿತು ನೀನು ನನ್ನ ಶರೀರ-ನೆಗೆ ಹೋದಂದಿನಿಂದ ನನ್ನ ನಿನ್ನ ಸಂಬಂಧವುಳಿದಿಲ್ಲ ಮುಂದೆ ನೀನು ನನ್ನ ಮನೆಗೆ ಬರುವದಿಲ್ಲ ಆದ್ದರಿಂದ ನಾನಾಗಿ ನಿನಗೆ ಈ ಫಾರಿಕತ್ತು ಕೊಟ್ಟರುತ್ತೇನೆ ನೀನು ನನ್ನ ನುನೆ ಬಿಟ್ಟು ಹೋದ ಲಾಗಾಯಿತ ನನ್ನ ಮೇಲಿನ ನಿನ್ನ ವಾಂಸಾ ಹಳ್ಳು ತಪ್ಪಿ ಹೋಗಿದ್ದು, ಈ ಮುಂದೆ ಜ ವಾರನಾ ಹಕ್ಕು ಬಲಕೂಲ ಉಳಿಯಲಿಲ್ಲ ನೀನು ಗರ್ಭಿಣಿಯಾಗಿ ಹಡೆದರೆ ಅದರ ವಾರನಾ ಹಳ್ಳು ನನ್ನ ಹಾಗು ನನ್ನ ದತ್ತಕ ಮಗ, ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಲ ಕೂಲ ನಡೆಯಲಾರದು ಮತ್ತು ತಪ್ಪಿದರೆ- ಜನಕ ತಂದೆ ಎಂದು ನನ್ನ ಹೆಸರು ಜನನ ರಿಜಿಸ್ಟರದಲ್ಲಿ ಹಬ್ಬಿಸಬಾರದು ಮತ್ತು ನಿನಗೆ ನೋಡಪತ್ರ ಕೊಟ್ಟಿದ್ದರಿಂದ ಹಾಗು ನೀನಾಗಿ ಜಾಳಿನೆ ಮಾಡಿದ್ದರಿಂದ ನಿನಗೆ ವೋಟಿನಿಗೂ ದೊರೆಯಲಾರದು ಅಂತಾ ಕೊಟ್ಟ ನೋಡಪತ್ರದ ನೋಟೀಸು

ತಾ|| ೧೦ ಏಪ್ರಿಲ ೧೯೨೦ನೇ ಇಸವಿ

ಈ ಎಗ್ಗೈ ಹೆಬ್ಬಟ್ಟಿನ ಗುರ್ತಾ ಚನ್ನಬಸಪ್ಪಾ ತಂದಿ ಬಸಪ್ಪಾ ಸಾಂಕಿ ಸಾ|| ಹಕ್ಕಿಮಕ್ಕೂರ ಈತನದು ಇರುತ್ತದೆ

ಸಿ ಧಾರವಾಡ ಬ್ಯಾಂಕಿನ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರವತ್ತಿಂಗಳ ಮುದ್ದತ ಕರಾರಿನಿಂದ ಹಣವನ್ನು ದಿವಾಳಿ ಪ್ರ ಇಟ್ಟುಕೊಳ್ಳಲಾಗುವು. ದರವನ್ನು ಸಮಜ್ಞ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಜ್ರ ಇಟ್ಟುಕೊಳು ವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೊಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವ್ವರ ವಿದ್ಯಾಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಹಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗದಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಎಪ್ರಿಲ ಅಖೈರ ತೊಳಗಾಗಿ ಹತ್ತು ಜನರನು ತಕ್ಕೊಳ್ಳುವವು. ಆದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ನಿರೀನ ಮಾಹಿತಿಯನ್ನು ಸಮಜ್ಞವು ಅ ನವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟನಹತ್ತರ, ಧಾರವಾಡ

ಈ ಪತ್ರಿಕೆಯನ್ನು ಅಡ್ವಾಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. R. 1443

ನಿತ್ಯ ಪತ್ರ

ಸಂಯುಕ್ತ ಕರ್ನಾಟಕ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ,

ವರ್ಷ) ಧಾರವಾಡ ಶನಿವಾರ ತಾರೀಖು ೧೨ ನೇ ಎಪ್ರಿಲ ೧೯೩೮ (ಸಂಚಿಕೆ ೪೮

ಧಾರವಾಡದ ಮಹದ್ಭಾಗ್ಯ

ನಾಳೆ ಬೆಳಗು ಮುಂಜಾನೆ ೬ ಗಂಟೆಗೆ

ಹುಬ್ಬಳ್ಳಿಯಿಂದ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ

ದೇ. ಭ. ದಿವಾಕರ ರಂಗರಾಯರು

ಮತ್ತು

ಸೇನಾಪತಿ ಹರ್ಡೀಕರ ನಾರಾಯಣರಾಯರು

ಇವರೀರ್ವರ ನೇತೃತ್ವದಲ್ಲಿ

ಕಾಯದೆಭಂಗಕ್ಕಾಗಿ ಅಂಕೋಲೆಗೆ ಹೊರಡುವ

ಏಕ ಜನ ಕನ್ನಡ ವೀರರಿಗಾಗಿ

ಹಾದಿಬುತ್ತಿಯನ್ನು ಅರ್ಪಿಸುವ ಮಹದ್ಭಾಗ್ಯವು

ಧಾರವಾಡಿಗರಿಗೆ ಮಾಸಲಾಗಿದೆ

ಈ ಅಪೂರ್ವ ಸಮಾರಂಭಕ್ಕಾಗಿ ಎಲ್ಲರೂ ಇಂದೇ ಸಾಯಂಕಾಲ

ಹುಬ್ಬಳ್ಳಿಗೆ ತೆರಳಲು ಅಣಿಯಾಗಿರಿ ಎಂದು ಮನವಿ ಮಾಡಿಸಿದೆ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೨೨೪೪ ನೆಯ ಶುದ್ಧ ೧೪

ಈ ವಿಜಯಂ ಶ್ರೀಕರನು
ಸ್ವ ಪಕ್ಷವಂತಿಯು ನಲಿಸಿರೆ ಸುಹಿತಚರಿತೆಗಳಿಂ ।
ದೀ "ವಿಜಯಂ" ಶ್ರೀಚರಣಾ ।
ನಾ ವಿಹಿತಂಗಳ ವಿವರಿಸಿನಲಿಪುನು ಸಾಜಂಗಿ

ವಿಲಾಯತಿಯ ಜನಳಿಯುನರ
ಗ್ರುಂಡಿಗ್ಗೆ ಪಲ್ಲಣಿಸಿದವು

ಹಿಂದುಸ್ಥಾನದಲ್ಲಿದ್ದ ಕಾಯದೆಭಂಗದ ಅಸಹಕಾರವು ಉಪ್ಪಿಗೆ ಮಟ್ಟಿಗಿದ್ದರೂ, ಅವರ ಸಂಗರ್ಷವು ವಿಲಾಯತಿಯ ಒಟ್ಟಿಗಾಗಿ, ಆ ಒಟ್ಟಿನ ಪ್ರಭಾವವು ಈ ದೇಶದಲ್ಲಿ ಮಂದವಾಗಲಾರಂಭಿಸಿತು, ಪಳಿಯನರು ಮುಂದೇನು ಗತಿಯೆಂದು ಚಿಂತಾಕ್ರಾಂತರಾಗಿದ್ದಾರೆ. ಚಿತೆಯು ಇಟ್ಟಿಗೆ ಉಳ್ಳ ಮುಂದಿದ್ದ ಒಣಗಿದ ಪದಾರ್ಥಗಳನ್ನು ಸುಟ್ಟರೆ ಚಿತೆಯು ಜೀವಂತ ಮನುಷ್ಯನನ್ನೇ ಸುಡುವದು. ವಿಲಾಯತಿಯ ಅವಿವೆಯ ವ್ಯಾಪಾರಸ್ಥರಿಗೆ ಈ ಚಿಂತೆಯು ಹೃಟ್ಟೆಗೇಗದಂತಾಗುವದಕ್ಕೆ ಬಹಳ ದಿವಸಗಳು ಬೇಕಾಗಿಲ್ಲ. ಹಿಂದೀಜನರ ಮಹಾತ್ವಾಕಾಂಕ್ಷೆಯನ್ನು ಪೂರ್ಣಮಾಡದೆ, ಅವರ ವೈರತ್ವವನ್ನು ಕಟ್ಟಿಕೊಳ್ಳಲಿಕ್ಕೆ ಪ್ರವೃತ್ತರಾಗಿ, ಇಂಥ ಫಲಭೋಗ ಉಣ್ಣುವದನ್ನು ತಾವಾಗಿ ತಂದುಕೊಂಡರು.

ಜಪಾನದ ವಿರುದ್ಧ ಇಂಗ್ಲಂಡದ ವ್ಯಾಪಾರಕ್ಕೆ ಹೆಚ್ಚು ಅನುಕೂಲತೆ ಬರೆಯಬೇಕೆಂದು ಜಪಾನಕ್ಕೆ ತೋರುವಂಥ ಪಕ್ಷಪಾತದ ಲಕ್ಷಣವನ್ನು ಬ್ರಿ. ಪ್ರತಿನಿಧಿ ಬಲದಿಂದ ಅಸೆಂಬ್ಲಿಯಲ್ಲಿ ಪಾಸಮಾಡಿಕೊಂಡದ್ದು ಅಳರಸರಿಗೆ ಈ ಒಪ್ಪಂದಕ್ಕೆ ಉಪಕ್ರಮಮಾಡಲು ಕಾರಣವಾಯಿತು. ಸ್ವತಃ ಪಂಡಿತ ಮೂಲವಿಯಾಯುವರ್ಗ ಬಹಿಷ್ಕಾರದ ಶಸ್ತ್ರಧಾರಣಮಾಡಿ, ವಿಲಾಯತಿಯವರ ಕೂಡ ಹೋರಾಡಲು ಸಜ್ಜಾಗಿದ್ದಾರೆ. ಈಗ ಬೇಕಾದ ಊಶಾಲ್ಲಾದ ಭೀತಿಯು ವರ್ತಮಾನ ಓವಿರಿ, ಆದರ ಕೊನೆಯಲ್ಲಿ ವಿಲಾಯತಿಯ ಬಟ್ಟೆಯನ್ನು ಕೂಡಿಸಾಕಿ, ಅದನ್ನು ಅಗ್ನಿಕಾರ್ಯ ತಕ್ಷಕಾಯ ಸ್ವಾಹಾ ಎಂದು ಅಗ್ನಿನಾರಾಯಣನಿಗೆ ಅರ್ಪಿಸಿದ್ದು ಕೊನೆಯಲ್ಲಿ ಬರೆದದ್ದು ಕಂಡುಬರುವದು. ಶ್ರೀ ನರಿಮನ್ನರಿಗೆ ತೀಕ್ಷ್ಣಯಾದ ದಿವಸ ಅದ ಹರತಾಳ ಮತ್ತು ಅಂದು ಸಾಯಂಕಾಲದಲ್ಲಿ ಕೂಡಿದ್ದ ಲಕ್ಷ ಜನರ ಲಕ್ಷ್ಯದುಕ ಸಭೆಯಲ್ಲಿ ಜನರು ತಮ್ಮ ವೈಲಿನ ಸೂರಾರು ರೂಪಾಯಿ ಬೆಲೆಬಾಳುವ ಅರಿವೆಗಳನ್ನು ಬಹಿಷ್ಕಾರದ ಬೆಂಕೆಯುಲ್ಲಿ ಹಾಕಿ, ಈನಂತರ ವಿಲಾಯತಿಯ ಬಟ್ಟೆಗೆ ಕೈ ಹಚ್ಚುವದಿಲ್ಲ. ಹಚ್ಚಿದರೆ ಕೈಗಳು ಕತ್ತರಿಸಿ ಹೋಗಲೆಂದು ಪಂಥಕೊಟ್ಟರು.

ಹರತಾಳದ ದಿವಸ ಅಲ್ಲಿಯ ಎಲ್ಲ ಅರಿವೆಯ (೧) ಮಂಗಳದಾಸ (೨) ಮೂಲಜಿ ಜೆ ರಾ (೩) ಲಕ್ಷ್ಮೀದಾಸ (೪) ಜವ್ಹೇರಿ ಈ ನಾಲ್ಕು ಮಾರ್ಕೆಟುಗಳು ಬಂದಾಗಿದ್ದವು. ಇವಲ್ಲದೆ ಸರಾಫ ಮತ್ತು ಮಾರವಾಡಿ ಪೇಟೆಗಳು ಬಂದಾಗಿದ್ದವು. ಜನಳ ಮತ್ತು ಜವಳಿಯವರಿಗೆ ದುಡ್ಡಿನ ಸಹಾಯ ಮಾಡುವ ಸರಾಫರೂ, ಮಾರವಾಡಿಗಳೂ ಒಂದಾಗಿದ್ದರಿಂದ ಮತ್ತು ಮೂರ.ತಿಂಗಳತನಕ ಯಾರೂ ವಿಲಾಯ.ಯು ಸನಗಳು ಕರಿಸಬಾರದೆಂಬ ದರಾವು ಪಾಸಾದಿದ್ದರಿಂದ ಮುಂಬಯಿಯಂಥ ಹಿಂದುಸ್ಥಾನದಲ್ಲಿ ಮೊದಲನೆಯ ನಂಬರಿನ ಪೇಟೆಯು ಕೈ ಬಿಟ್ಟಿತೆಂದು, ಮ್ಯಾಂಚೆಸ್ಟರದವರು ಉಸಿರು ಬಿಡಿಕರೆ ಅಕ್ಷರ್ಯವೇನು? ಮುಂಬಯಿಯಂತೆ ಕರಾಚಿ, ಅಮೃತಸರ, ದಿಲ್ಲಿ ಕಲಕತ್ತೆ ಮತ್ತು ವಪ್ರಾಸಿ ಸ್ಥಳೇ ಶ ಜವಳಿಯುವರು ಶಪಥಮಾಡಿದರಾಯಿತು ತಮ್ಮ ನೂರಾರು ಗಿರಣಿಗಳ ಭಂಡಾರ ಬಂದಾಗಿ, ಲಕ್ಷಾವಧಿ ಜನರು ದರಿದ್ರನಾರಾಯಣರಾಗುವರೆಂದು ಲವ ಹೊಟ್ಟೆಯ ವಿಚಾರ ಹೇಗೆಂದೂ ಪ್ರಧಾನರಿಗೆ ನಿಗಿಯನಾದ ಪ್ರಶ್ನವಾಗಿರುತ್ತದೆ.

ಇಂಗ್ರೇಜ ಮುತ್ಸದ್ದಿಗಳು ಹಿಂದುಸ್ಥಾನವನ್ನು ಅಳುವದಿಲ್ಲ. ಮ್ಯಾಂಚೆಸ್ಟರದವರು ಅಳುತ್ತಾರೆಂದು ಈ ವರೆಗೆ ಹೇಳುತ್ತಾ ಬಂದರು. ಮ್ಯಾಂಚೆಸ್ಟರದ ಮೂಗು ಹಿಡಿದರೆ- ಅಳರಸರು ತಾವಾಗಿ ಬಾಯಿ ತೆರೆಯುವರೆನ್ನುವದಕ್ಕೆ ಇಷ್ಟೊಂದು ಉತ್ತಮವಾದ ಸಂಧಿಯಾಗಿದೆ. ಆದರೆ ಹಿಂದುಸ್ಥಾನವು ವಿಶೇಷವಾಗಿ ಕಾಯದೆಭಂಗದವರು ನನಗರ್ಥ ಧನಗರ್ಥ ಪ್ರಾಣಾಯ ಎನ್ನುವವಕ್ಕೆ ಒಪ್ಪಲಾಗರು. ಇಂಗ್ಲಿಷ-ಕೂಲಿಕಾರರು ಹೊಟ್ಟಿಗಿಲ್ಲದೆ ಬಳಲುತ್ತಾರೆಂದು ಅವರ ಮುಂದೆ ತಾವು ಅಪ್ಪದ್ದನ್ನೆಲ್ಲ ಇಟ್ಟು, ತಮ್ಮವರನ್ನು ಉಪವಾಸ ವನವಾಸದಿಂದ ಬಳಲಿಸುವ ಕೃತ್ಯವನ್ನಾಡಲಾರರು. ಮನೆಗೆದ್ದು ಪಾರುಗೆದಿಯಬೇಕೆಂದು ನಾಣ್ಣುಡಿಯುಂಟು.

ಸತ್ಯಾಗ್ರಹ ನಿಧಿಗೆ ಗುಪ್ತದಾನ

ಇಲ್ಲಿಯ ಗನೇ ಗುಪ್ತದಾನವು ೧೦೦ ರೂ. ದ್ದು ದೊರಕಿತ್ತು. ಈಗ ಇನ್ನೊಬ್ಬ ಸನ್ಮನುಷ್ಯರು ೧೦೦ ರೂ ದಾನವನ್ನು ಕೊಟ್ಟಿದ್ದಾರೆ. ಧರ್ಮ ಯುದ್ಧಕ್ಕೆ ಹಣದ ಕೊರತೆಯೇ?

ಬೆಳಗಾವಿಯಲ್ಲಿ ಸತ್ಯಾಗ್ರಹದ ಸಪ್ತರ ಸಂಭ್ರಮ!

ಘಟ್ಟಣದ ತುಂಬ ಹರತಾಳ.

---)(೦)(---

ವೀರಶೈವ ಪಾಟೀಲ ವಕೀಲರ ಕಾಯದೆಭಂಗ.

---)(೦)(---

ಬೆಳಗಾವಿಯು ಅಳರಸರು ಲೋಕನಾಯಕರಾಗಿ ಇಡೀ ಹಿಂದುಸ್ಥಾನದ ತುಂಬ ಸ್ಪುಸಿದ್ದರಾಗಿರುವ ದೇಶಭಕ್ತ ಗಂಗಾಧರರಾವ ಇವರಿಗೆ ಬಲಗಜ್ಜಂತಿರುವ ಶ್ರೀ. ನಾರಾಯಣರಾವ ಜೋಶಿ, ಜೀವಣರಾವ ಯಾಳಗಿ, ಪ.ತ್ಮ ಕರ್ನಾಟಕಕ್ಕೆಲ್ಲ ಪೂಜ್ಯಮೂರ್ತಿರಾದ ಶ್ರೀ. ಅನಂತನಾಯಿಕ ದಾಸಿಡೆ ಇವರನ್ನು ಹಿಡಿದು ಪೂಜ್ಯಮಣ್ಣಿಯಾದರು. ಇಗಲು ಹಿಡಿದರೆ- ಊಟ ತುಂಬ ಚಳವಳಿಯಾಗುವದೆಂದು ಸೋಮವಾರ ರಾತ್ರಿಯಲ್ಲಿ ಹಿಡಿದರು. ಮುದಿಕೆಯು ಕೋಳಿಯನ್ನು ಮುಟ್ಟಿಬಿಟ್ಟರೆ- ಬೆಳಗಾಗದೆವಲ್ಲೇ? ಬೆಳಗಾದ ಕೂಡಲೆ ಊಟ ತುಂಬ ಚಳವಳಿಯಾಯಿತು. ಹರತಾಳವಾಯಿತು. ಸಾಯಂಕಾಲದಲ್ಲಿ ಸುಮಾರು ಜನರ ಪ್ರಚಂಡ ಬಾಹೀರ ಸಭೆಯಾಯಿತು. ಕಾಯದೆಭಂಗದ ಬಗ್ಗೆ ವಿಚಾರ ಮಾಡಿದಂಥವರ ಮನಸ್ಸಿನಲ್ಲಿ ಸತ್ಯಾಗ್ರಹದ ಹುರುಪು ಹುಟ್ಟಿತು ಜನರು ಹೆಸರು ಕೊಟ್ಟರು. ರಾ. ಬ ಅಂಗಡಿಯವರು ಅವರ ಸಭೆ ಸ್ಥಾಪಿಸಲುದ್ಯುಕ್ತರಾಗುವಾಗ ಅವರ ತುಲದ ಮತ್ತು ಅವರ ವ್ಯವಸಾಯ ಬಂಧುಗಳಾದ ಶ್ರೀ. ಪ ಟೀಲ ವಕೀಲರು ಕಾಯದೆಭಂಗದ ದೀಕ್ಷೆ ತಕ್ಕೊಂಡರು. ಅಳರಸರು ಜಾಮೀನು ಮಾಡಲು ದೈನವೊಂದು ನೂಡಿಸಿಳ್ಳು.

ಗದಿಗಿನ ಶ್ರೀ. ಜಾವಿಯಾಳ ವಕೀಲರ
ಕಾಯದೆಭಂಗ.

---(೦)---

ಧಾರವಾಡದಂತೆ ಗದಿಗಿನ ವಕೀಲರು ಖಾದಿಯ ಪ್ರಸಾರದಲ್ಲಿ ಮುಂದಿರವಿದ್ದಾರೆ. ಬಹುತೇಕ ವಕೀಲರು ಎಂದಿಯನ್ನೇ ಧರಿಸಿ ಕೋರ್ಟಿಗೆ ಬರುವರು. ಇವರು ತೋರಿಸಿದ ಈ ದೇಶಾಭಿಮಾನವು ಎರಡನೆಯ ತರಗತಿಯದು. ಒಂದನೆಯ ತರಗತಿಯು ಬೇರೆಯುಂಟು. ಅದು ಕಾಯದೆಭಂಗವು ಶ್ರೀ. ಜಾವಿಹಾಳ ವಕೀಲರು ಸತ್ಯಾಗ್ರಹದ ಪ್ರತಿಜ್ಞಾಪತ್ರಿಕೆಯ ಮೇಲೆ ಸಹೀ ಮಾಡಿ, ಹೊಂದರಾ ಎಂದು ಕೂಡಲೆ- ಹೇಳಿದಲ್ಲಿಗೆ ಹೋಗಲು- ಸ್ವರಾಜ್ಯ ತೆಗೆದಿಟ್ಟಿರುತ್ತಾದೆ. ಆದ್ದರಿಂದ ಅಲ್ಲಿಯ ಅಗ್ರಕಾಂಬೂಲಕ್ಕೆ ಇವರೇ ಅರ್ಪರಾಗಿದ್ದಾರೆ.

ಕೋರ್ಟಿನಲ್ಲಿ ನಡೆದ ವೋಜು.

—(೦)—

ಅಸಹಕಾರ ಚಳವಳಿಯಿಂದ ಈ ಸಾಲೆಯ ಕಾಯದೆಭಂಗದ ಚಳವಳಿಯಲ್ಲಿ ಅನೇಕ ಕೌತುಕದ ಸಂಗತಿಗಳು ತೋರಿಬರಲಾರಂಭಿಸಿವೆ. ಮುಂಬಯಿಯಲ್ಲಿ ಮ್ಯಾಜಿಸ್ಟ್ರೇಟರು- ಹೆಸರು ಕೇಳಲು- ಯಾರು ಸಾಹೂರೀ ಬೂಡಬೇದಿರಿ. ಏನೇನೂ ಹೇಳುವದಿಲ್ಲ. ನಿಮಗೆ ತಿಳಿದದ್ದು ಬರೆದುಕೊಳ್ಳಿರೆಂದರು. ಕೊನೆಯಲ್ಲಿ ಮ್ಯಾಜಿಸ್ಟ್ರೇಟರು ಉದ್ಯೋಗವೇನೆಂದು ಪ್ರಶ್ನೆ ಮಾಡಲು- ಅದಕ್ಕೆ ಮಾತ್ರ ಉಪ್ಪು ಮಾಡುವ ವ- ಉಪ್ಪಾರನೆಂದು ಉತ್ತರ ಕೊಟ್ಟರು. ಆಗ ತೋಬೆಸ ಶುಂಬ ಜನರು ದೊಡ್ಡ ಧ್ವನಿಯಿಂದ ನಕ್ಕರು.

ಶ್ರೀ. ಜಮುನಾಲಾಲ ಬಜಾಜರಿಗೆ ಎರಡು ವರ್ಷ ಶಿಕ್ಷೆ ಕೊಟ್ಟ ಮಹಾನುಭಾವನು ಧಾರವಾಡದವರಿಗೆ ಗೊತ್ತಿನವರಾದ ಘನ್ಯಾಂ ಬಿನಾಪೋಬರು ಮಿಹಾರಣೆಯ ವೇಳೆಯಲ್ಲಿ ಶ್ರೀ. ಬಜಾಜರಿಗೆ ಖರ್ಚಿ ಕೊಡುವ ಸ್ಪರ್ಶ ಬಂತು. ನಾವೇ ಒರು ತಾವೇ ಖರ್ಚಿ ಕೊಡಲು ಸಿದ್ಧರಾದರು. ಆದರೆ ಅದನ್ನು ಅಕೋಟಿಗಳ ಪಂಜರದಲ್ಲಿ ಕೊಡಬೇಕೆಂದರು. ಇದು ಉಪಮಾನವೆಂದು ಒಬ್ಬರು ಖರ್ಚಿ ತಕ್ಕೊಳ್ಳಲಿಲ್ಲ.

ಇದೇ ಮ್ಯಾಜಿಸ್ಟ್ರೇಟು ರಾಜಾ ಎಂಬ ಹೆಸರಿನ ಸ್ವಯಂಸೇವಕನಿಗೆ ಆರು ತಿಂಗಳ ಶಿಕ್ಷೆ ವಿಧಿಸಿದರು. ರಾಜಾನು ಸಂತೋಷದಿಂದ ಶಿಕ್ಷೆ ಅನುಭವಿಸಲು ಹೊರಟನು. ಜೋಡುವಾಗ ಘನ್ಯಾಂ ಬೀಜಸಾಹೇಬರೇ ನಿಮಗೆ ಈ ಕೆಲಸ ಮಾಡುತ್ತೀರಿ ನಿನ್ನಂತೆ ಸ್ವಯಂಸೇವಕನಾಗಿ ಉಪ್ಪಿನ ಕಾಯದೆ ಮುರಿಯಿರೆಂದು ಅವರಿಗೆ ಉಪದೇಶ ಮಾಡಿದನು.

ಶ್ರೀ. ಜಮುನಾಲಾಲ ಬಜಾಜ, ಕೋರಾಡ ಮೊದಲಾದವರಿಗೆ ಆದ ಉಗ್ರ ಶಿಕ್ಷೆಯ ಬಗ್ಗೆ ಲೋಕಜರ್ಜೆ ನಡೆದಿದೆ. ಆರು ತಿಂಗಳಿಗಿಂತ ಹೆಚ್ಚು ಶಿಕ್ಷೆಯಿಲ್ಲ. ಎರಡು ವರ್ಷದ ಆಟ ಹೇಗೆ ಹೂಡಿದರೆಂದು ಕಾಯದೆ ಪಂಡಿತರು ಜರ್ಜನೆ ಮಾಡುತ್ತಾರೆ.

ಗುಜರಾಥ ವಿದ್ಯಾ ಪೀಠದಲ್ಲಿ ಪ್ರೊಫೇಸರರಾಗಿರುವ ಶ್ರೀ. ಕೇಕಾಥಾಯಿ ದೇಸಾಯಿಯವರಿಗೆ ಜಲಾಲಪೂರದ ಮ್ಯಾಜಿಸ್ಟ್ರೇಟರು ಒಂದು ವರ್ಷದ ಶಿಕ್ಷೆ ವಿಧಿಸಿದರು. ಇವರು ಅಪರಾಧ ಮಾಡಿದ್ದೇನೆಂದು ಹೇಳಿದಾಗ-ನಾನು ಮೇರೆ ಕಾಯದೆಯನ್ನು ಪ್ರಚಾರದಲ್ಲಿ ತರತಕ್ಕವರು. ಸೃಷ್ಟಿಕ್ರಮಕ್ಕೆ ವಿರುದ್ಧವಾಗಿ ಮನುಷ್ಯರು ಮಾಡಿದ ಕಾಯದೆಯನ್ನು ಮುರಿಯಕ್ಕಿವರೇ ಎಂದು ಉತ್ತರ ಕೊಟ್ಟರು.

ಕಾಯದೆಭಂಗ

ರಾಮದುರ್ಗದಲ್ಲಿ ಕಾಯದೆಭಂಗದಲ್ಲಿ ಸೇರಿದರು.

—(೦)—

ಅಮದಿನಗರದಲ್ಲಿ ಸ್ವಯಂಸೇವಕರಿಗೆ ನಿರೋಪ ಕಳಿಸುವದಕ್ಕಾಗಿ ಮೂರು ಸಾವಿರ ಜನರ ಸಭೆ ಕೂಡಿತ್ತು. ರಾಮದುರ್ಗದ ಜೇಕೆಯವರು ಅಧ್ಯಕ್ಷರಾಗಿದ್ದರು. ಈ ರಾ. ಬ. ರವರು ಒಂದು ಕಾಲದಲ್ಲಿ ಪೆಸರಾದ ವಕೀಲರು. ಅವರು ಸಂಪೂರ್ಣ ಸ್ವತಂತ್ರತೆಯ ಧ್ಯೇಯಕ್ಕಾಗಿ ಕಾಯದೆಭಂಗ ಮಾಡುವ ಸಭೆಯ ಅಧ್ಯಕ್ಷರಾದದ್ದು ಸ್ತುತಿಸಲ್ಪಡುವಂಥದ್ದು; ಕರ್ನಾಟಕದ ರಾಮದುರ್ಗದ್ದೂರಲ್ಲಿ ಒಬ್ಬರಾದರೂ ಜೀತೆಯವರನ್ನು ಅನುಸರಿಸುವರೇ

ಉಪ್ಪಿನ ಬೆಲೆ ಅರ್ಧ ಇಳಿಯಿತು.

—(೦)—

ಮುಂಬಯಿಯಲ್ಲಿ ಅಲ್ಲಿಯ ಪಾಯೆಲಿ ಒಂದಕ್ಕೆ ಹತ್ತು ಬಿಲ್ಲಿ ಬೀಳುತ್ತಿತ್ತು. ಅದರ ಬೆಲೆ ಈಗ ಐದು ಬಿಲ್ಲಿಯಾಗಿದೆ.

ನಾಯಿಯೂ ಕಾಯದೆಭಂಗ ಮಾಡಿತು.

—(೦)—

ಸುರತದಲ್ಲಿ ಪ್ಯಾಂಟಿಯವರು ತಮ್ಮಂತೆ ನಾಯಿಗೂ ಬುರವಸಿ ಹುರಕಡ್ಡಿ, ತಿನಿಸುತ್ತಿದ್ದಾರೆ ಮತ್ತು ಇದರ ಕೂಲಿಗೆ ತಾವು ಮಾಡಿದ ಉಪ್ಪಿನ ಪಟ್ಟಣ ಕಟ್ಟಿಬರ್ತಾರೆ. ಪೋಲಿಸರು ನಾಯಿಯನ್ನು ಹಿಡಿದಿಲ್ಲ

ಮನೆಮನೆಗೂ ಸ್ವಂತದ ಉಪ್ಪು.

—(೦)—

ಸರಕಾರೀ ಉಪ್ಪಿನ ವ್ಯಾಪಾರ ಹೋಯಿತು

—(೦)—

ಸುರತದಲ್ಲಿ ಪ್ರತಿಯೊಂದು ಮನೆಯಲ್ಲಿ ಸರಕಾರದ ಉಗ್ರಾಣದಿಂದ ತಂದ ಮತ್ತು ತಾವು ಮಾಡಿದ ಉಪ್ಪನ್ನು ಉಪಯೋಗಿಸುವರು. ನೀವು ಯಾವ ಉಪ್ಪನ್ನು ಉಪಯೋಗಿಸುತ್ತೀರೆಂದು ಪೋಲಿಸರು ಅಜ್ಜಿಗೆ ಕೇಳಿದರೆ- ತಮ್ಮಾ ನಮ್ಮ ಉಪ್ಪೆಂದು ಅವಳುಉತ್ತರ ಕೊಡುತ್ತಾಳೆ.

ಪೋಲಿಸರು ಜಗತ್ತನ್ನು ತುರಂಗ ಮಾಡುವರು

—(೦)—

ಗುಜರಾಥದ ಕುಂಬ ಕಾಯದೆಭಂಗ ನಡೆದಿದ್ದರಿಂದ ಪೋಲಿಸರಿಗೆ ಯಾರನ್ನು ಹಿಡಿಯಲಿ, ಯಾರನ್ನು ಬಿಡಲೆಂತಾಗಿದೆ.

ದಿಲ್ಲಿಯಲ್ಲಿ ಲಕ್ಷರೀ ಕಾಯಯಂತೆ ದಸ್ತಗಿರಿ.

—:(೦):—

೨೪ ಪುರುಷರನ್ನೂ ಇಬ್ಬರು ಸ್ತ್ರೀಯನ್ನೂ ಹಿಡಿದರು.

—(೦)—

ದಿಲ್ಲಿಯಲ್ಲಿ ಪೋಲಿಸರು ಲಕ್ಷರೀ ಕಾಯದೆಯ ಸ್ವರೂಪವನ್ನೆಳವಡಿಸಿದ್ದಾರೆ. ಪೂರ್ ಪ್ರಮುಖರಾದ ಅರಾ ಕೆಂಕರಲಾಲ, ದೇವದಾಸ ಗಾಂಧಿ, ಜ್ಯಾರಿಸ್ಟರ ಅಸಫಲ್ಲಿ, ಚಮನಲಾಲ, ಶ್ರೀಮತಿ ವಾರ್ತಿದೇವಿ ಮತ್ತು ಸತ್ಯದೇವಿ ಇವರನ್ನು ರಾಜದ್ರೋಹದ ಆರೋಪದಿಂದ ಹಿಡಿದಿದ್ದಾರೆ.

ಸ್ತ್ರೀಯರ ಏಕಟಿಂಗ-

೫ ದಸ್ತಗಿರಿಯಿಂದ ದಿಲ್ಲಿಯಲ್ಲಿ ಅದ್ಭುತ ಗಳವಳ ಎದ್ದಿದ್ದು, ಸ್ತ್ರೀಯರೇ ಮುಂದಾಗಿ, ವಿಶಾಯತಿಯ ಅರಿವೆಯ ಅಂಗಡಿಗಳ ಮುಂದೆ ಏಕಟೇನ ನಡೆಸಿದ್ದಾರೆ.

ನಾಸಿಕದಲ್ಲಿ ಭಯಂಕರ ದಂಗೆ

ನೂರು ಜನರು ಘಾಯವಾದರು

—

ನಾಸಿಕದಲ್ಲಿ ಶ್ರೀ. ಕಾಲಾರಾಮರಾಮ ದೇವರ ರಥವನ್ನು ಜಗ್ಗಲು ಅಸ್ಪೃಶ್ಯರು ಒಂದು ಸಲ್ಲಾಗ್ರಪ ಮಾಡತೊಡಗಲು ಗುರುಂಕರ ದಾಂಗೆಯಾಗಿ ನೂರಾರು ಜನರು ಘಾಯವಾದರು.

ಕೂಲಿಕಾರ ಮತ್ತು ಮುಸಲಮಾನರ

ಸ್ವತಂತ್ರ ಕಾಯದೆಭಂಗ.

—(೦)—

ಅಮದಾಬಾದದಲ್ಲಿರುವ ಕೂಲಿಕಾರರು ಮುಸಲಮಾನರೂ ಕಾಯದೆಭಂಗ ಮಾಡಲು ತಮಗೆ ಸ್ವತಂತ್ರವಾಗಿ ಇಡೀ ಒಂದೊಂದು ದಿವಸ ಬಿಟ್ಟು ಕೊಡಬೇಕೆಂದು ಕಾಂಗ್ರೆಸ ಕಮೀಟಿಗೆ ವಿನಂತಿ ಮಾಡಿಕೊಂಡಿದ್ದಾರೆ.

---

೩೧ ಮುಸಲಮಾನರ ಜಾಹೀರ ಸಂದೇಶ.

—(೦)—

ಕಲಕತ್ತೆಯ ೩೧ ಜನ ಪ್ರಮುಖ ಮುಸಲ್ಮಾನರು ಮುಸಲಮಾನರಿಗಾಗಿ ಜಾಹೀರ ಸಂದೇಶವನ್ನು ಪ್ರಸಿದ್ಧ ಮಾಡಿ, ಯುದ್ಧದ ಹೊರ್ತು ಬೇರೆ ಯಾವಿಲ್ಲ. ಸ್ವಾತಂತ್ರ್ಯವಿಲ್ಲ. ಆದ್ದರಿಂದ ತಾವು ಸತ್ಯಾಗ್ರಹದಲ್ಲಿ ಸೇರಿರೆಂದು ಆರಕ್ಕೆ ಮಾಡಿಕೊಂಡಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಬಲಿದಾನ.

೧೩ನೆಯ ತಾರೀಖಿನಲ್ಲಾದ ಹುಬ್ಬಳ್ಳಿಯಲ್ಲಿಯ ಮೆರವಣಿಗೆಯ ದೃಶ್ಯ.



ಡಾ. ಹರಡೀಕರ, ಶ್ರೀ ದಿವಾಕರರು ಮಧ್ಯದಲ್ಲಿರುವರು.

ಕರ್ನಾಟಕದ ಸೊದಲನೆಯ ಒಲ
ಕರ್ನಾಟಕ ಸಿಂಹ

ದೇಶಕಾಂಡೆ ಗಂಗಾಧರರಾಯರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ
ಕಮಿಟಿಯ ಅಧ್ಯಕ್ಷರಾದ

ಶ್ರೀ ದಿವಾಕರ ರಂಗರಾಯರು.

ಹುಬ್ಬಳ್ಳಿಯಂದ ಹೊರಟ ಡಾ. ಹರಡೀಕರರ ಪಕ್ಷಕ.

ಬಾಗಲಕೋಟೆಯ " ಕನ್ನಡಿಗನ " ಸಂಪಾದಕರು



ಶ್ರೀ ಮಂಗಳನೇಢ ತ್ರೀನಿವಾಸರಾಯರು.

ಕರ್ನಾಟಕದ ಖಾದೀ ವಿಭಾಗದ
ಕಾರ್ಯದರ್ಶಿ

ಕಾಜಲಗಿ ಹಣಮಂತರಾಯರು

Reg. No. B 1443

ನಿತ್ಯ ಪತ್ರ ಬೆಲೆ ಅಧಾಣಿ

ಸಂಪಾದಕರು— ಆರ್ಟ್ ಪ್ರಾಡಕ್ಟ್ ಪಾಲಾಟ್ಟಾದಾರ್ ಪೂಸಲೇರಿ,

ವರ್ಷ) ಧಾರವಾಡ ಗುರುವಾರ ತಾರೀಖು ೧೩ ನೇ ಎಪ್ರಿಲ ೧೯೨೦ (ಸಂಚಿಕೆ ೪೫

ವಿಜಯ.

ಚಾಳುಕ್ಯ ವಿಕ್ರಮ ವರ್ಷ ಚಾಲ ವೈತ್ರ ಶುದ್ಧ ೧

ಆ ವಿಜಯಂ ತ್ರಿಕಸಿಯ
